# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಮಹಾರಾಷ್ಟ್ರ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯ ಪ್ರಯುಕ್ತ ಲಾತೂರ್‌ನಲ್ಲಿ ಶಿವಾಜಿ ಮಹಾರಾಜರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.


ಸಂಪುಟ : 45 | ಸಂಚಿಕೆ : 21 | ಶೋಭಕೃತ್ – ಮಾಘ–ಫಾಲ್ಗುಣ | ಕಲಿಯುಗಾಬ್ದ 5126 | 01–03–2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಜ್ಞಾನದೇಗುಲಗಳು ಭಾರತೀಯರ ಶ್ರದ್ಧಾಕೇಂದ್ರಗಳು

ದೇವರ ಪ್ರಾರ್ಥನೆಯೊಂದಿಗೆ ವಿದ್ಯೆಯನ್ನು ಕಲಿಯಲು ಆರಂಭಿಸುವುದು ನಮ್ಮ ಸಂಸ್ಕೃತಿ. ಆದರೆ ಇತ್ತೀಚಿನ ದಿನಗಳಲ್ಲಿ ಪ್ರಮಾಣ ಪತ್ರವನ್ನು ಹೊಂದಲು ಮಾತ್ರ ಶಾಲಾ– ಕಾಲೇಜು – ವಿಶ್ವವಿದ್ಯಾಲಯಗಳು ಇವೆಯೇನೋ ಎಂಬಂತಾಗಿದೆ. ಕೆಲವು ದಿನಗಳ ಹಿಂದೆ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿರುವ 833 ವಸತಿ ಶಾಲೆಗಳಲ್ಲಿ, ಶಾಲೆಯ ಎದುರುಗಡೆಯಲ್ಲಿರುವ (ಪ್ರವೇಶದ್ವಾರದಲ್ಲಿ) ನಾಮಫಲಕವನ್ನು ಬದಲಿಸುವ ಪ್ರಯತ್ನ ನಡೆದಿತ್ತು. ಇಲ್ಲಿಯವರೆಗೂ "ಜ್ಞಾನದೇಗುಲವಿದು ಕೈಮುಗಿದು ಒಳಗೆ ಬಾ" ಎಂಬ ಘೋಷವಾಕ್ಯ ಕೆಲವು ಕಡೆಗಳಲ್ಲಿ "ಜ್ಞಾನದೇಗುಲವಿದು ಧೈರ್ಯವಾಗಿ ಪ್ರಶ್ನಿಸಿ" ಎಂದು ಬದಲಾಗಿತ್ತು.

ರಾಷ್ಟ್ರಕವಿ ಕುವೆಂಪುರವರ 'ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೆ' ಗೀತೆಯ ಪ್ರೇರಣೆಯಿಂದ ರಚನೆಗೊಂಡಿದ್ದರೂ ವಾಕ್ಯಕ್ಕೆ ಕೊಕ್ಕೆ ಬಿತ್ತು. ದಶಕಗಳಿಂದ ವಸತಿ ಶಾಲೆಗಳಲ್ಲಿದ್ದ ವಾಕ್ಯದಲ್ಲಿ ಹುಳುಕನ್ನು ಹುಡುಕುವ ಪ್ರಯತ್ನ ನಡೆಯಿತು. ಇದೇ ರೀತಿ ಇತ್ತೀಚೆಗೆ ಒಂದು ವಿಶ್ವವಿದ್ಯಾನಿಲಯದ ಅಧ್ಯಾಪಕರು, ವಿದ್ಯಾರ್ಥಿಗಳೆಲ್ಲರೂ ಸೇರಿ ಆವರಣದೊಳಗೆ ಪುಸ್ತಕಗಳನ್ನಿಟ್ಟು ಶಾರದಾ ಪೂಜೆಯನ್ನು ಮಾಡಿದ್ದೂ ದೊಡ್ಡ ಅಪರಾಧವೆಂದು ಬಿಂಬಿಸಲಾಗಿತ್ತು. ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಸ್ಥಳಗಳಲ್ಲಿ ಧಾರ್ಮಿಕ ಪೂಜೆಗಳು ಸರಿಯೇ ಎಂಬ ಪ್ರಶ್ನೆ ಎತ್ತಲಾಯಿತು. ಯಾರು ಅಜ್ಞಾನದಲ್ಲಿರುತ್ತಾರೋ ಅವರಿಗೆ ಜ್ಞಾನವೇನೆಂಬುದು ತಿಳಿಯುವುದಿಲ್ಲ. ಜ್ಞಾನವನ್ನು ಪಡೆಯುವ ದಾರಿಯೂ ಗೊತ್ತಿರುವುದಿಲ್ಲ. ಅದಕ್ಕಾಗಿ ಅಸಂಬದ್ಧವಾಗಿ ನಡೆದುಕೊಳ್ಳುತ್ತಾರೆ.

ಭಾರತೀಯ ಸಂಸ್ಕೃತಿಯಲ್ಲಿ ಸರಸ್ವತಿಯನ್ನು ವಿದ್ಯಾಧಿ ದೇವತೆಯೆನ್ನುತ್ತಾರೆ. ಅವಳನ್ನು ಶಾರದೆ, ವಾಣಿ, ಭಾರತೀ, ಭಾಷಾ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಸರಸ್ವತಿಯು ವಿನಯ ಸಂಪನ್ನಳೂ, ಆಗಾಧ ಜ್ಞಾನರಾಶಿಯನ್ನು ಹೊಂದಿದವಳೂ ಆಗಿರುವಳೆಂಬ ನಂಬಿಕೆ ಮತ್ತು ಶ್ರದ್ಧೆ ಭಾರತೀಯರಿಗಿದೆ.

ವಿದ್ಯೆಯು ವಿನಯವನ್ನು ತಂದುಕೊಡುತ್ತದೆ. ವಿನಯದಿಂದ ಗೌರವವು ಸಿಗುತ್ತದೆ. ಗೌರವದಿಂದ ಸಂಪತ್ತು, ಸಂಪತ್ತಿನಿಂದ ಧರ್ಮ ಮತ್ತು ಸುಖಗಳು ಲಭಿಸುತ್ತವೆ ಎಂದು ಸುಭಾಷಿತ ಹೇಳುತ್ತದೆ. ಆದರೆ ವಿನಯವನ್ನು ನೀಡುವ ವಿದ್ಯಾಸ್ಥಾನಗಳನ್ನೂ ತಮ್ಮ ಹಿತಾಸಕ್ತಿಗಳಿಗೆ ಬಳಸಿಕೊಳ್ಳುವ ಪ್ರಯತ್ನಗಳಿಂದ ನಷ್ಟ ಸಮಾಜಕ್ಕೇ ಆಗಿದೆ.

ಪ್ರಶ್ನಿಸುವ ಸ್ವಭಾವ ನಮ್ಮ ಸಂಸ್ಕೃತಿಯ ಭಾಗವೇ ಆಗಿದ್ದರೂ ಪ್ರತ್ಯೇಕವಾಗಿ ಜ್ಞಾನದೇಗುಲದೊಳಗೆ ಹೋಗಿ ಧೈರ್ಯವಾಗಿ ಪ್ರಶ್ನಿಸಬೇಕು ಎಂದರೆ ಯಾರನ್ನು ಪ್ರಶ್ನಿಸಬೇಕು? ಇಲ್ಲಿ ಶಿಕ್ಷಕರನ್ನು ಎಂದೇ ಭಾವನೆ ಮೂಡುತ್ತದೆ. ಧೈರ್ಯವಾಗಿ ಪ್ರಶ್ನಿಸುವುದು ಅಂದರೆ ಗುರುಗಳಿಂದ ಜ್ಞಾನವನ್ನು ಪಡೆಯುವ ಸಲುವಾಗಿ ಇರಬೇಕೇ ಹೊರತು ಬೇರೆ ಉದ್ದೇಶವಿರಬಾರದು. ನಮ್ಮಲ್ಲಿರುವ ಹತ್ತು ಉಪನಿಷತ್ತುಗಳಲ್ಲಿ ಪ್ರಶ್ನೋಪನಿಷತ್ ಒಂದು. ಇಲ್ಲಿ ಆರು ಮಂದಿ ವಿದ್ಯಾರ್ಥಿಗಳು ಪಿಪ್ಪಲಾದನೆಂಬ ಬ್ರಹ್ಮಜ್ಞಾನಿಯ ಬಳಿಗೆ ಹೋಗಿ ಬ್ರಹ್ಮ, ಜೀವ, ಜಗತ್ತು ಈ ವಿಷಯಗಳಿಗೆ ಸಂಬಂಧಿಸಿದಂತಹ ಪ್ರಶ್ನೆಗಳನ್ನು ಮಾಡುತ್ತಾರೆ. ಈ ಪ್ರಶ್ನೆಗಳಿಗೆ ಗುರುವು ಅವರ ಮಟ್ಟಕ್ಕಿಳಿದು ಉತ್ತರ ಕೊಡುತ್ತಾನೆ. ಹಾಗೆಯೇ ಹಿಂದೆ ರಾಜ ಮಹಾರಾಜರೂ ಕೂಡಾ ವಿನೀತಭಾವದಿಂದಲೇ ಗುರುಕುಲಗಳನ್ನೂ, ಆಶ್ರಮಗಳನ್ನೂ ಪ್ರವೇಶಿಸುತ್ತಿದ್ದರು ಎಂಬುದು ನಮ್ಮ ಕಾವ್ಯಗಳಲ್ಲಿ ಕಂಡುಬರುತ್ತದೆ. ಇವೆಲ್ಲವೂ ವಿದ್ಯೆಯನ್ನು ಪಡೆಯಬೇಕಾದರೆ ಗರ್ವ ಅಹಂಕಾರದಿಂದ ಸಾಧ್ಯವಿಲ್ಲ. ಬದಲಾಗಿ ವಿಧೇಯತೆಯಿಂದ, ವಿನಯದಿಂದ ಗುರುವಿನ ಬಳಿ ಹೋದಾಗ ಮಾತ್ರ ಸಾಧ್ಯ ಎಂಬುದನ್ನು ತಿಳಿಸುತ್ತದೆ.

> **ಹಿನ್ನೆಲೆ:** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಬಂಧಿತ ಟೆಲಿಗ್ರಾಮ್ ಗುಂಪಿನಲ್ಲಿ ಉನ್ನತ ಅಧಿಕಾರಿಯೊಬ್ಬರ ಡಿಜಿಟಲ್ ಆದೇಶದ ಮೇರೆಗೆ ವಸತಿ ಶಾಲೆಗಳಲ್ಲಿ ಬಳಸಲಾಗಿದ್ದ ರಾಷ್ಟ್ರಕವಿ ಕುವೆಂಪು ಅವರ ಸಾಹಿತ್ಯ ಪ್ರೇರಿತ ಘೋಷ ವಾಕ್ಯ 'ಜ್ಞಾನದೇಗುಲವಿದು ಕೈ ಮುಗಿದು ಒಳಗೆ ಬನ್ನಿ' ಯನ್ನು 'ಜ್ಞಾನದೇಗುಲವಿದು ಧೈರ್ಯವಾಗಿ ಪ್ರಶ್ನಿಸಿ' ಎಂದು ಬದಲಿಸಲು ಸೂಚಿಸಲಾಗಿತ್ತು. ಇದರಂತೆ ಅನೇಕ ಶಾಲೆಗಳಲ್ಲಿ 'ಜ್ಞಾನದೇಗುಲವಿದು ಧೈರ್ಯವಾಗಿ ಪ್ರಶ್ನಿಸಿ' ಎಂದು ಬರೆಯಲಾಗಿತ್ತು. ಇದು ರಾಜ್ಯಾದ್ಯಂತ ಚರ್ಚೆಗೆ ಕಾರಣವಾಗಿತ್ತು. ಶಿಕ್ಷಕರ ವಲಯದಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು.

ಶಾಲೆಗಳು ಜ್ಞಾನದೇಗುಲವೂ ಹೌದು, ವ್ಯಕ್ತಿ ವಿಕಸನದ ಕೇಂದ್ರವೂ ಹೌದು. ಹೀಗಾಗಿ ಅಲ್ಲಿ ಯಾವುದೇ ರಾಜಕೀಯ ನಡೆಗಳು ಸಲ್ಲ. ಅವುಗಳು ತಮ್ಮ ಕಾರ್ಯ ಶುದ್ಧತೆಯ ಜೊತೆಗೆ ಉದ್ದೇಶ ಶುದ್ಧತೆಯನ್ನೂ ಉಳಿಸಿಕೊಳ್ಳಬೇಕು. ಇದನ್ನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟ ಇಲಾಖೆಗಳು ಹೆಚ್ಚು ಮುತುವರ್ಜಿವಹಿಸಬೇಕು. ಮಹಾಕವಿ ಕುವೆಂಪುರವರ 'ಕೈಮುಗಿದು ಒಳಗೆ ಬಾ' ಎಂಬ ಘೋಷವಾಕ್ಯವನ್ನು ತೆಗೆದಿದ್ದನ್ನು ಸಾಹಿತಿಗಳು, ಶಿಕ್ಷಕರು ಮತ್ತು ಪೋಷಕರು ಖಂಡಿಸಿದ್ದು ಗೊಂದಲ ಬಿತ್ತುವ ನಡೆಗೆ ನಾಡಿನ ಜನತೆಯ ಪ್ರೋತ್ಸಾಹವಿಲ್ಲ ಎನ್ನುವುದನ್ನು ತಿಳಿಸುತ್ತದೆ. ಇಂತಹ ನಡೆಗಳಿಂದ ಮಹಾಕವಿಯ, ನಾಡಿನ ಘನತೆಯನ್ನು ಅರಿತು ನಡೆಯುವ ಜನರ ಮನೋಭಾವಕ್ಕೆ ಧಕ್ಕೆಯುಂಟಾಗುವುದರಿಂದ ಸರಕಾರಗಳು ಅಂತಹ ಅವಕಾಶ ನೀಡಬಾರದು. •


■ **ಡಾ. ಭಾಗ್ಯಲಕ್ಷ್ಮಿ ಬಿ.ಜಿ.**

ಸಹ ಕಾರ್ಯದರ್ಶಿ, ಸಂಸ್ಕೃತ ಭಾರತಿ, ಕರ್ನಾಟಕ ದಕ್ಷಿಣ



## ತೆರಿಗೆ ಹಂಚಿಕೆ: ಆರೋಪಗಳು, ವಾಸ್ತವ

ಪ್ರತಿ ರಾಜ್ಯವೂ ಕೇಂದ್ರ ಸರ್ಕಾರಕ್ಕೆ ತನ್ನ ಪಾಲಿನ ತೆರಿಗೆಯನ್ನು ಪಾವತಿಸುತ್ತದೆ. ರಾಜ್ಯಗಳಿಂದ ಸಂಗ್ರಹವಾದ ತೆರಿಗೆಯಲ್ಲಿ ಪುನಃ ರಾಜ್ಯಗಳಿಗೇ ವಿನಿಯೋಗ ಆಗುವಂತೆ ಹಂಚಲಾಗುತ್ತದೆ. ಆದರೆ ಈ ಹಂಚಿಕೆಯ ವೇಳೆ ಅಭಿವೃದ್ಧಿ ಹೊಂದದ ರಾಜ್ಯಗಳಿಗೆ ಸ್ವಲ್ಪ ಹೆಚ್ಚು ಪ್ರಾಶಸ್ತ್ಯ ನೀಡುವುದು ಯಾವುದೇ ಸರ್ಕಾರದ ಸಹಜ ಕ್ರಮ. ಉದಾಹರಣೆಗೆ ಕರ್ನಾಟಕದಲ್ಲಿ ತೆರಿಗೆಗೆ ಅತೀ ಹೆಚ್ಚು ಕೊಡುಗೆ ನೀಡುತ್ತಿರುವ ಜಿಲ್ಲೆ ರಾಜಧಾನಿ ಬೆಂಗಳೂರು. ಆದರೆ ರಾಜ್ಯದಲ್ಲಿ ಜಿಲ್ಲಾವಾರು ತೆರಿಗೆ ಹಂಚಿಕೆಯಾಗುವಾಗ ಬೆಂಗಳೂರು ನೀಡಿದ ತೆರಿಗೆ ಹಣವನ್ನು ಕೇವಲ ಬೆಂಗಳೂರಿಗೆ ನೀಡುವುದಿಲ್ಲ. ಬದಲಾಗಿ ಅಭಿವೃದ್ಧಿ ಹೊಂದುತ್ತಿರುವ ಮತ್ತು ಹೊಂದಬೇಕಾದ ಜಿಲ್ಲೆಗಳಿಗೆ ಪ್ರಾಮುಖ್ಯತೆ ನೀಡಲಾಗುತ್ತದೆ.

ರಾಜ್ಯಕ್ಕೆ ಪ್ರತಿವರ್ಷ ಕೇಂದ್ರದಿಂದ ಬರಬೇಕಾದ ಪಾಲಿನಲ್ಲಿ ತಾರತಮ್ಯವಾಗಿದ್ದರೆ ಅದನ್ನು ಪ್ರಶ್ನಿಸುವು ತಪ್ಪಲ್ಲ. ಆದರೆ ಪ್ರಶ್ನಿಸುವ ಧಾವಂತದಲ್ಲಿ ರಾಷ್ಟ್ರದ ಸಾರ್ವಭೌಮತೆಗೆ ಧಕ್ಕೆ ಬರುವಂತಹ ಹೇಳಿಕೆಗಳನ್ನು ನೀಡುವುದು ನಾಡಿನ ಐಕ್ಯತೆಗೆ ತೊಂದರೆಯನ್ನುಂಟು ಮಾಡುತ್ತದೆ. ಇದಕ್ಕೆ 'ನಮ್ಮ ತೆರಿಗೆ ನಮ್ಮ ಹಕ್ಕು' ಎಂಬ ಅಭಿಯಾನವೂ ಒಂದು ನಿದರ್ಶನ. 'ನನ್ನ ತೆರಿಗೆ ನನ್ನ ಹಕ್ಕು' ಎಂಬ ಘೋಷಣೆಯ ಮೂಲಕ ಶುರುವಾದ ಅಭಿಯಾನದಲ್ಲಿ ರಾಷ್ಟ್ರ ವಿಭಜನೆಯ ಮಾನಸಿಕತೆಯು ತಲೆಯೆತ್ತಿದವು. ಆ ಹೇಳಿಕೆಗಳನ್ನು ಸಮರ್ಥಿಸಿಕೊಳ್ಳುವ ಘಟನೆಗಳೂ ಜರುಗಿತು. ಜವಾಬ್ದಾರಿಯುತ ಸ್ಥಾನಗಳಲ್ಲಿರುವ ಜನಪ್ರತಿನಿಧಿಗಳು ಮಾಡಿದ ಆರೋಪಗಳು ವಾಸ್ತವಕ್ಕೆ ದೂರವಾದವು ಎನ್ನುವುದನ್ನು ಅನೇಕ ಸಾಕ್ಷ್ಯಾಧಾರಗಳು ಸಾಬೀತು ಪಡಿಸಿವೆ.

**ಆರೋಪ –1:** ರಾಜ್ಯ ಕೇಂದ್ರಕ್ಕೆ ದೊಡ್ಡ ತೆರಿಗೆ ಮೊತ್ತ ನೀಡುತ್ತಿದ್ದು, ಅನುದಾನ ಬಿಡುಗಡೆಯಲ್ಲಿ ಕೇಂದ್ರ ರಾಜ್ಯಕ್ಕೆ ಅನ್ಯಾಯ ಮಾಡಿದೆ.

**ವಾಸ್ತವ:** ಹಣಕಾಸು ಆಯೋಗವು ರಾಜ್ಯದ ಆರ್ಥಿಕತೆ, ಭೂಭಾಗ, ಜನಸಂಖ್ಯೆ, ತೆರಿಗೆ ಸಂಗ್ರಹ, ಪರಿಸರ ಮತ್ತು ಅರಣ್ಯದ ವ್ಯಾಪ್ತಿ ಎಂಬ ಮಾನದಂಡಗಳನ್ನು ಆಧಾರವಾಗಿರಿಸಿ ರಾಜ್ಯಗಳಿಗೆ ಅನುದಾನವನ್ನು ಬಿಡುಗಡೆ ಮಾಡುತ್ತದೆ. 14ನೇ ಹಣಕಾಸು ಆಯೋಗವು ಈ




ಮಾನದಂಡಗಳ ಆಧಾರದಲ್ಲಿ ರಾಜ್ಯಕ್ಕೆ ಕೊಟ್ಟ ಅನುದಾನ ಮತ್ತು 15ನೇ (ಇಂದಿನ) ಹಣಕಾಸು ಆಯೋಗವು ರಾಜ್ಯಕ್ಕೆ ಕೊಟ್ಟ ಅನುದಾನದ ತುಲನೆ ಮಾಡಿದಾಗ ಇಂದಿನ ಹಣಕಾಸು ಆಯೋಗವು ರಾಜ್ಯದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ನೀಡಿರುವುದು ತಿಳಿದು ಬರುತ್ತದೆ.

**ಆರೋಪ–2:** ತೆರಿಗೆ ಹಂಚಿಕೆಯಲ್ಲಿ ಉತ್ತರ ಭಾರತ, ದಕ್ಷಿಣ ಭಾರತ ಬೇಧವನ್ನು ಮಾಡಲಾಗುತ್ತಿದೆ.

**ವಾಸ್ತವ** : ರಾಜ್ಯಗಳ ತೆರಿಗೆಯಲ್ಲಿ ಕೇಂದ್ರದ ಬೊಕ್ಕಸಕ್ಕೆ ಬಂದ ಶೇ.50ರಷ್ಟು ತೆರಿಗೆ ಹಣದಲ್ಲಿ ಪ್ರತಿಶತ 42ರಷ್ಟು ರಾಜ್ಯಗಳಿಗೇ ನೀಡಲಾಗುತ್ತದೆ. ಹೀಗೆ ಪ್ರತೀ ರಾಜ್ಯಕ್ಕೆ ಕೊಡುವ ಅನುದಾನವು ರಾಜ್ಯದಲ್ಲಿ ಸಂಗ್ರಹವಾಗುವ ತೆರಿಗೆ, ಜನಸಂಖ್ಯೆ ಮತ್ತು ಭೂ ವಿಸ್ತೀರ್ಣಗಳನ್ನು ಆಧಾರವಾಗಿರಿಸಿ ಆಗಿರುವ ಕಾರಣ ಅನುದಾನ ಹಂಚಿಕೆಯ ಸಮಯದಲ್ಲಿ ಕೇಂದ್ರ ಉತ್ತರ – ದಕ್ಷಿಣ ಭೇದವನ್ನು ಮಾಡುತ್ತದೆ ಎಂಬುದು ಸತ್ಯಕ್ಕೆ ದೂರವಾದ ಮಾತು.

**ಆರೋಪ–3:** ತೆರಿಗೆ ಸಂಗ್ರಹದಲ್ಲಿ ಕರ್ನಾಟಕ ಮುಂಚೂಣಿಯಲ್ಲಿ ಇದ್ದರೂ ತೆರಿಗೆ ಹಂಚಿಕೆಯಲ್ಲಿ ಅನ್ಯಾಯ ಮಾಡಲಾಗಿದೆ.

**ವಾಸ್ತವ** : 14ನೇ ಹಣಕಾಸು ಆಯೋಗ ಹೆಚ್ಚು ತೆರಿಗೆ ಸಂಗ್ರಹ ಮಾಡುವ ರಾಜ್ಯಗಳಿಗೆ ವಿಶೇಷ ಸೌಲಭ್ಯಗಳ ಕುರಿತು ಪ್ರಸ್ತಾಪಿಸುವುದಿಲ್ಲ. ಆದರೆ 15ನೇ ಹಣಕಾಸು ಆಯೋಗವು ಹೆಚ್ಚು ತೆರಿಗೆ ಸಂಗ್ರಹಿಸಿದ ರಾಜ್ಯಗಳಿಗೆ ಹೆಚ್ಚುವರಿ ಶೇ. 2.5ರಷ್ಟು ಮೊತ್ತವನ್ನು ಮೀಸಲಿಟ್ಟಿದೆ.

**ಆರೋಪ–4:** ಹಿಂದಿನ ಸರ್ಕಾರ ನೀಡಿದ್ದಕ್ಕಿಂತ ಕಡಿಮೆ ಮೊತ್ತವನ್ನು ಈಗಿನ ಸರ್ಕಾರ ಕರ್ನಾಟಕಕ್ಕೆ ನೀಡುತ್ತಿದೆ.

**ವಾಸ್ತವ** : 2004ರಿಂದ 2014ರ ವರೆಗಿನ ಅವಧಿಯಲ್ಲಿ ತೆರಿಗೆ ಹಂಚಿಕೆಯ ಸಮಯದಲ್ಲಿ ರಾಜ್ಯಕ್ಕೆ ಸಿಕ್ಕಿದ್ದು 81,795.19 ಕೋಟಿ ರೂಪಾಯಿಗಳಾದರೆ 2014ರಿಂದ 2024ರವರೆಗಿನ ಅವಧಿಯಲ್ಲಿ ಇಂದಿನ ಕೇಂದ್ರ ಸರ್ಕಾರ ರಾಜ್ಯಕ್ಕೆ ಕೊಟ್ಟ ಮೊತ್ತ 2,85,452 ಕೋಟಿ ರೂಪಾಯಿಗಳು! ಅಂದರೆ ಇಂದು ಕೇಂದ್ರ ಸರ್ಕಾರ ರಾಜ್ಯಕ್ಕಾಗಿ ಕೊಟ್ಟ ಮೊತ್ತ ಅಂದಿನ ಮೊತ್ತಕ್ಕಿಂತ ಮೂರುವರೆ ಪಟ್ಟು ಹೆಚ್ಚಾಗಿದೆ. ಗ್ರಾಂಟ್ ಇನ್ ಏಡ್ ಲೆಕ್ಕ ಹಾಕುವುದಾದರೆ ಇಂದು ಕೇಂದ್ರವು ರಾಜ್ಯಕ್ಕೆ ಕೊಡುವ ಗ್ರಾಂಟ್ 3.4 ಪಟ್ಟು ಹೆಚ್ಚಾಗಿದೆ. (2004ರಿಂದ 2014ರ ವರೆಗಿನ ಅವಧಿಯಲ್ಲಿ 60,779.84 ಕೋಟಿ ರೂಪಾಯಿಗಳಾದರೆ, 2014ರಿಂದ 2024ರವರೆಗಿನ ಅವಧಿಯಲ್ಲಿ ಇಂದಿನ ಕೇಂದ್ರ ಸರ್ಕಾರ ರಾಜ್ಯಕ್ಕೆ ಕೊಟ್ಟ ಮೊತ್ತ 2,08,832.02 ಕೋಟಿ ರೂಪಾಯಿಗಳು).

**ಆರೋಪ– 5:** ರಾಜ್ಯಗಳಿಂದ ವಿಶೇಷ ಕಾರಣಗಳಿಗಾಗಿ ಸಂಗ್ರಹ ಮಾಡಲಾಗುವ ತೆರಿಗೆ (ಸೆಸ್) ಮೊತ್ತವನ್ನು ಹೆಚ್ಚಿಸಲಾಗಿದೆ.

**ವಾಸ್ತವ:** 2014ರಲ್ಲಿ ವಿಧಿಸುತ್ತಿದ್ದ ಸೆಸ್ ಸಂಗ್ರಹ ಒಂದೂವರೆ ಲಕ್ಷ ಕೋಟಿ ರೂಪಾಯಿಗಳಾಗಿದ್ದರೆ, ಇಂದು ಸೆಸ್ ಸಂಗ್ರಹ ಐದುವರೆ ಲಕ್ಷ ಕೋಟಿ ರೂಪಾಯಿಗಳಿಗೆ ಎಂದು ಮೊತ್ತದ ಆಧಾರದಲ್ಲಿ ಹೇಳಲಾಗುತ್ತಿದೆ. ಆದರೆ ಅಂದಿನ ಬಜೆಟ್ ಗಾತ್ರಕ್ಕೂ (2014ರಲ್ಲಿ 17 ಲಕ್ಷ ಕೋಟಿ) ಮತ್ತು ಇಂದಿನ ಬಜೆಟ್ ಗಾತ್ರಕ್ಕೂ (47 ಲಕ್ಷ ಕೋಟಿ) ಹೋಲಿಸಿ ಶೇಕಡಾವಾರು ಲೆಕ್ಕಾಚಾರ ಮಾಡಿದರೆ ಸೆಸ್ ಸಂಗ್ರಹ ಮೊತ್ತದ ಅಂತರವನ್ನು ತೋರಿಸಿ ಹೇಳುವಷ್ಟಾಗಿಲ್ಲ ಎನ್ನುವುದು ತಿಳಿಯುತ್ತದೆ.

ಭಾರತ ಜಗತ್ತಿನ ಮೂರನೇ ಆರ್ಥಿಕತೆಯಾಗಿ ಬೆಳೆದು ನಿಲ್ಲಬೇಕೆಂಬ ಕನಸ್ಸನ್ನು ನನಸಾಗಿಸಲು ಶ್ರಮಿಸುವ ವೇಳೆಯಲ್ಲಿ, ರಾಷ್ಟ್ರದ ಏಕತೆ ಮತ್ತು ಅಖಂಡತೆಗೆ ಧಕ್ಕೆ ಆಗುವಂತಹ ಉತ್ತರ – ದಕ್ಷಿಣವೆಂಬ ಭೇದವನ್ನು ಹುಟ್ಟು ಹಾಕಿ, ರಾಷ್ಟ್ರಭಂಜಕ ನಡೆಗಳಿಗೆ ಭಾರತ ಜನನಿಯ ತನುಜಾತೆಯಾದ ಕರ್ನಾಟಕ ಸಾಕ್ಷಿಯಾಗುತ್ತಿರುವುದು ವಿಷಾದನೀಯ. ಇಂತಹ ಯತ್ನಗಳಿಗೆ ಜನತೆ ಕಿವಿಗೊಡದೆ ರಾಷ್ಟ್ರಕಟ್ಟುವ ಕಾಯಕಕ್ಕೆ ಹೆಗಲುಕೊಟ್ಟು ಬಲ ತುಂಬಬೇಕಾಗಿದೆ. •

## ಸಂಸ್ಮರಣೆ  ಮೇಜರ್ ಸಂದೀಪ್ ಉನ್ನಿಕೃಷ್ಣನ್ (15 ಮಾರ್ಚ್ 1977– 28 ನವೆಂಬರ್ 2008)



ರಾಷ್ಟ್ರದ ಅಖಂಡತೆಯನ್ನು ಮತ್ತು ಸಾರ್ವಭೌಮತ್ವದ ರಕ್ಷಣೆಗಾಗಿ ಕಾಲಗಳ ಪರಿವೇ ಇಲ್ಲದೆ, ರಾಷ್ಟ್ರಪ್ರೇಮವನ್ನೇ ಶ್ರೇಷ್ಠ ಎಂದು ಪರಿಗಣಿಸಿ, ಸೇವಾಧರ್ಮವನ್ನು ಮಾಡಿ, ದೇಶಕ್ಕಾಗಿ ಪ್ರಾಣ ಅರ್ಪಿಸಿದ ಯೋಧರು ಅನೇಕರು. ಅಂತಹ ಯೋಧರಲ್ಲಿ ಓರ್ವರು ಮೇಜರ್ ಸಂದೀಪ್ ಉನ್ನಿಕೃಷ್ಣನ್.

1977ರಲ್ಲಿ ಕೇರಳದ ಕೋಯಿಕ್ಕೋಡ್‌ನಲ್ಲಿ ಜನಿಸಿದ್ದ ಸಂದೀಪ್ ಅವರ ತಂದೆ ನಿವೃತ್ತ ಇಸ್ರೋ ಅಧಿಕಾರಿ ಕೆ. ಉನ್ನಿಕೃಷ್ಣನ್ ಹಾಗೂ ತಾಯಿ ಧನಲಕ್ಷ್ಮೀ ಉನ್ನಿಕೃಷ್ಣನ್. ಚಿಕ್ಕಂದಿನಿಂದಲೂ ಭಾರತೀಯ ಸೇನೆಗೆ ಸೇರಿ ದೇಶಸೇವೆ ಮಾಡಬೇಕೆಂಬ ತುಡಿತ ಹೊಂದಿದ್ದ ಸಂದೀಪ್ ಬಾಲ್ಯದ ದಿನಗಳಲ್ಲಿ ಉತ್ತಮ ಕ್ರೀಡಾಪಟು ಎಂದು ಗುರುತಿಸಿಕೊಂಡಿದ್ದರು.

1995ರಲ್ಲಿ ಭಾರತೀಯ ಸೇನೆಯ ಭಾಗವಾದ ಸಂದೀಪ್ ಮಹಾರಾಷ್ಟ್ರದ ಪುಣೆಯಲ್ಲಿರುವ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಗೆ ಸೇರಿದರು. 1999 ಜೂನ್ 12ರಂದು, ಅವರು ಭಾರತೀಯ ಸೇನೆಯ ಬಿಹಾರ ರೆಜಿಮೆಂಟ್‌ನ 7ನೇ ಬೆಟಾಲಿಯನ್‌ನಲ್ಲಿ ಲೆಫ್ಟಿನೆಂಟ್ ಆಗಿ ನೇಮಕಗೊಂಡರು. 1999ರಲ್ಲಿ ಆಪರೇಷನ್ ವಿಜಯದಲ್ಲಿ, ಪಾಕಿಸ್ತಾನ ಪಡೆಗಳಿಂದ ಭಾರೀ ಫಿರಂಗಿ ಗುಂಡಿನ ಮತ್ತು ಸಣ್ಣ ಶಸ್ತ್ರಾಸ್ತ್ರಗಳ ಗುಂಡಿನ ಮುಖಾಂತರ ತಮ್ಮ ಶತ್ರುಗಳ ವಿರುದ್ಧ ಹೋರಾಡಿದ ಸಂದೀಪ್ 31 ಡಿಸೆಂಬರ್ 1999 ರ ಸಂಜೆ ಅವರು ಆರು ಸೈನಿಕರ ತಂಡವನ್ನು ಮುನ್ನಡೆಸಿದರು ಮತ್ತು ಎದುರಾಳಿಯಿಂದ 200 ಮೀಟರ್ ದೂರದಲ್ಲಿ ಪೋಸ್ಟ್ ಸ್ಥಾಪಿಸಿ ತಮ್ಮ ಕೆಚ್ಚೆದೆಯನ್ನು ಸಾಬೀತುಪಡಿಸುತ್ತಾರೆ.

2003 ಜೂನ್ 12ರಂದು ಕ್ಯಾಪ್ಟನ್ ಶ್ರೇಣಿಯಲ್ಲಿ ಸ್ಥಾನ ಪಡೆದ ಸಂದೀಪ್, 2005 ಜೂನ್ 13 ರಂದು ಮೇಜರ್ ಶ್ರೇಣಿಗೆ ಬಡ್ತಿ ಪಡೆದರು. ಗುಲ್ಮಾರ್ಗ್ ಹೈ ಆಲ್ಟಿಟ್ಯೂಡ್ ವಾರ್‌ಫೇರ್ ಸ್ಕೂಲ್‌ನಲ್ಲಿಯೂ ತರಬೇತಿ ಪಡೆದ ಅವರು ಸಿಯಾಚಿನ್, ಜಮ್ಮು ಮತ್ತು ಕಾಶ್ಮೀರ, ಗುಜರಾತ್, ಹೈದರಾಬಾದ್ ಮತ್ತು ರಾಜಸ್ಥಾನ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಸೇವೆ ಸಲ್ಲಿಸಿದ ನಂತರ, ಅವರು ರಾಷ್ಟ್ರೀಯ ಭದ್ರತಾ ಸಿಬ್ಬಂದಿ(NSG)ಗೆ ಆಯ್ಕೆಯಾದರು. ತರಬೇತಿಯನ್ನು ಪೂರ್ಣಗೊಳಿಸಿದ ನಂತರ, ಅವರನ್ನು ಜನವರಿ 2007ರಲ್ಲಿ NSG ಯ 51 ವಿಶೇಷ ಕ್ರಿಯಾ ಗುಂಪಿನ (51 SAG) ತರಬೇತಿ ಅಧಿಕಾರಿಯಾಗಿ ನಿಯೋಜಿಸಲಾಯಿತು ಮತ್ತು NSGಯ ವಿವಿಧ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದರು.

2008ರ ನವೆಂಬರ್ 26 ರಂದು ಪಾಕಿಸ್ತಾನದ 10 ಭಯೋತ್ಪಾದಕರು ಸಮುದ್ರದ ಮೂಲಕ ಭಾರತದ ಮುಂಬೈನಲ್ಲಿ ನುಸುಳಿ ಬಾಂಬ್ ದಾಳಿಯ ಮೂಲಕ 166 ಅಮಾಯಕ ಜನರನ್ನು ಹತ್ಯೆಗೈಯುತ್ತಾರೆ. ಭಾರತೀಯ ಸೇನೆಯ ಮೇಜರ್ ಸಂದೀಪ್ ಉನ್ನಿಕೃಷ್ಣನ್ ಅವರು ತಾಜ್ ಪ್ಯಾಲೇಸ್ ಹೋಟೆಲ್‌ನಲ್ಲಿ ಭಯೋತ್ಪಾದಕರನ್ನು ತಟಸ್ಥಗೊಳಿಸುವ ಜವಾಬ್ದಾರಿಯುತ ರಾಷ್ಟ್ರೀಯ ಭದ್ರತಾ ಸಿಬ್ಬಂದಿ (NSG) ಘಟಕದ ಭಾಗವಾಗಿದ್ದರು. ಅವರು ಇತರೆ ಅಧಿಕಾರಿಗಳೊಂದಿಗೆ ಹೋಟೆಲ್‌ಗೆ ಪ್ರವೇಶಿಸಿದರು ಮತ್ತು ಭಯೋತ್ಪಾದಕರೊಂದಿಗೆ ಗುಂಡಿನ ಚಕಮಕಿಯಲ್ಲಿ ತೊಡಗಿದರು. ಏಕಕಾಲದಲ್ಲಿ 50 ಒತ್ತೆಯಾಳುಗಳನ್ನು ಸ್ಥಳಾಂತರಿಸಿದರು. ಹತ್ತಾರು ಜೀವಗಳನ್ನು ಉಳಿಸುವ ಸಂದರ್ಭದಲ್ಲಿ ಹೋಟೆಲ್‌ನೊಳಗೆ ಭಯೋತ್ಪಾದಕರನ್ನು ಗುಂಡಿಕ್ಕಿ ಕೊಂದರು. ಗುಂಡಿನ ಚಕಮಕಿ ಮುಂದುವರೆಯುತ್ತಲೇ ಗುಂಡು ಅವರ ಎದೆಗೆ ನಾಟಿದಾಗಲೂ, "ದಯವಿಟ್ಟು ಮೇಲೆ ಹತ್ತಿ ಬರಬೇಡಿ, ನಾನೊಬ್ಬನೇ ಅವರನ್ನು ಎದುರಿಸುತ್ತೇನೆ", ಎಂದು ಹೇಳಿ ಶತ್ರುಗಳ ವಿರುದ್ಧ ಸೆಟೆದು ನಿಂತು ಮುನ್ನುಗ್ಗಿದ ವೀರ ಯೋಧ ಸಂದೀಪ್ ಉನ್ನಿಕೃಷ್ಣನ್ ಅಂದು ಅನೇಕರನ್ನು ಉಳಿಸುವುದಕ್ಕಾಗಿ ತಮ್ಮ ಪ್ರಾಣಾರ್ಪಣೆ ಮಾಡುತ್ತಾರೆ.

ಕೆಚ್ಚೆದೆಯ ಯೋಧ ಸಂದೀಪ್ ಉನ್ನಿಕೃಷ್ಣನ್ ತಮ್ಮ ದೇಶಸೇವೆಗೆ ಸೇನಾ ಸೇವಾ ಮೆಡಲ್, ಸ್ಪೆಶಲ್ ಸರ್ವೀಸ್ ಮೆಡಲ್, ಆಪರೇಶನ್ ಪರಾಕ್ರಮ್ ಮೆಡಲ್ ಜೊತೆಗೆ ಅಶೋಕ ಚಕ್ರ ಪ್ರಶಸ್ತಿಯ ಗೌರವಕ್ಕೆ ಪಾತ್ರರಾಗುತ್ತಾರೆ.

ಶಶಿ ಕಿರಣ್ ಟಿಕ್ಕಾ ಅವರ ನಿರ್ದೇಶನದಲ್ಲಿ ಮೇಜರ್ ಸಂದೀಪ್ ಉನ್ನಿಕೃಷ್ಣನ್ ಅವರ ಜೀವನಾಧಾರಿತ ಚಲನಚಿತ್ರವಾದ ಮೇಜರ್ 2022ರಂದು ತೆರೆ ಕಂಡಿದ್ದು, 26/11ರ ಮುಂಬೈ ದಾಳಿಯಲ್ಲಿ ಜನರ ರಕ್ಷಣೆಗಾಗಿ ಪ್ರಾಣತೆತ್ತ ವೀರಯೋಧನ ಕುರಿತು ಇಂದಿನ ಯುವಜನತೆಯ ಮುಂದಿರಿಸಲಾಗಿದೆ. •

## ಎಲ್ಲೋ ಕೇಳಿದ ಕಥೆ

### ತಿರುಗುಬಾಣ

"ವಂದೇ ಮಾತರಂ" ಚಳವಳಿಯಿಂದಾಗಿ ಕೇಶವನ ಶಿಕ್ಷಣ ಅನಿಶ್ಚಿತತೆಯಲ್ಲಿದ್ದ ದಿನಗಳು. ಒಮ್ಮೆ ಅವನು ಭಂಡಾರಾದಲ್ಲಿನ ತನ್ನ ಸಂಬಂಧಿಕರೊಬ್ಬರ – ಶ್ರೀ ಜಕಾತದಾರ ಎಂಬವರ – ಮನೆಗೆ ಹೋಗಿದ್ದ. ಅದೇ ಸಂದರ್ಭದಲ್ಲಿ ಅವನ ಇನ್ನೋರ್ವ ಸಂಬಂಧಿಕರು – ಶ್ರೀ ಅಮೃತರಾವ್ ಬಂಬಾವಾಲೆ ಎಂಬವರು ಸಹ ಇನ್ನಾವುದೋ ಕಾರ್ಯನಿಮಿತ್ತ ಅಲ್ಲಿಗೆ ಬಂದಿದ್ದರು. ಒಂದು ಉನ್ನತ ಸರಕಾರಿ ಉದ್ಯೋಗದಲ್ಲಿ ಇದ್ದವರು ಅವರು. ಮಾತುಕತೆಯ ನಡುವೆ ಜಕಾತದಾರರು ಅಮೃತರಾಯರಿಗೆ ಕೇಶವನ ಪರಿಚಯ ಮಾಡಿಸಿದರು. ಅದರಲ್ಲಿ "ಈ ಹುಡುಗನೇನೋ ಬಲು ಚುರುಕು. ಆದರೆ ಓದಿಗಿಂತ ಚಳವಳಿಗಳಲ್ಲೆ ಹೆಚ್ಚು ಆಸಕ್ತಿ ಓದಿನ ಕಡೆ ಲಕ್ಷ್ಯ ಕಡಿಮೆ' ಎಂಬ ಮಾತನ್ನೂ ಸೇರಿಸಿದರು.

ಅಮೃತರಾಯರು ಸರಕಾರಿ ಅಧಿಕಾರಿಯ ಠೀವಿಯಲ್ಲಿ ಕೇಶವನ ಬೆನ್ನು ನೇವರಿಸುತ್ತ "ನೋಡಪ್ಪ, ನೀನಿನ್ನು ಚಿಕ್ಕವನು. ವಿದ್ಯಾರ್ಥಿಯಾಗಿದ್ದಿಯಾ. ಅನಗತ್ಯದ ಆಂದೋಲನಗಳಲ್ಲಿ ತಲೆ ಹಾಕಿ ಭವಿಷ್ಯವನ್ನು ಯಾಕೆ ಹಾಳು ಮಾಡಿಕೊಳ್ಳುತ್ತಿಯಾ? ಅದೆಲ್ಲ ಮುಂದೆ ದೊಡ್ಡವನಾದ ಮೇಲೆ ಮಾಡಬೇಕಾದಂತಹದು. ವಿದ್ಯಾಭ್ಯಾಸದಲ್ಲಿ ತೊಡಗಿರುವಾಗ ಕೇವಲ ಓದುವಿಕೆಯೊಂದೇ ವಿದ್ಯಾರ್ಥಿಗೆ ಶೋಭೆ" ಎಂದು ಉಪದೇಶ ಮಾಡಿದರು.

ಆಗ ಕೇಶವ "ಸರಿ, ನೀವು ಹೇಳಿದಂತೆಯೇ ಮಾಡುವೆ. ಕೇವಲ ಕಲಿಯುವಿಕೆಯೊಂದನ್ನೇ ಮಾಡುವೆ. ಚಳವಳಿಯಲ್ಲಿ ತಲೆ ಹಾಕುವುದಿಲ್ಲ. ಆದರೆ ದೇಶವನ್ನು ಸ್ವತಂತ್ರಗೊಳಿಸಲು ಯಾರಾದರೊಬ್ಬರು ಕೆಲಸ ಮಾಡಲೇಬೇಕಲ್ಲ. ನೀವೀಗ ವಿದ್ಯಾರ್ಥಿಯಲ್ಲ. ದೊಡ್ಡವರೂ ಆಗಿದ್ದೀರಿ. ದೇಶದ ಸ್ವಾತಂತ್ರ್ಯಕ್ಕಾಗಿ ನೀವು ಚಳವಳಿಯಲ್ಲಿ ತೊಡಗಿಕೊಳ್ಳಿ. ಆಗ ನಾನು ಕೇವಲ ವಿದ್ಯಾಭ್ಯಾಸವನ್ನಷ್ಟೇ ಮಾಡುವೆ" ತುಂಬ ಸ್ಪಷ್ಟವಾಗಿ, ಆದರೆ ಅಷ್ಟೇ ವಿನಮ್ರನಾಗಿ ಉತ್ತರಿಸಿದ.

ಅಮೃತರಾಯರು ಸುಸ್ತು. ತಮ್ಮ ಉಪದೇಶ ತನಗೇ ತಿರುಗುಬಾಣವಾಗಬಹುದೆಂದು ಅವರು ನಿರೀಕ್ಷಿಸಿರಲಿಲ್ಲ.

ಮೂಲ: ಮಂದಾರ




₹100/–

ಪುಸ್ತಕ ಪರಿಚಯ

## ಪುಸ್ತಕ: ಧರ್ಮ ಮತ್ತು ಸಂಸ್ಕೃತಿ

**ಲೇಖಕರು : ರಂಗಾಹರಿ**

**ಪ್ರಕಾಶಕರು : ಸಾಹಿತ್ಯ ಸಂಗಮ**

ಕಳೆದ ಸುಮಾರು ಐದಾರು ದಶಕಗಳಿಂದ ಸೆಕ್ಯುಲರ್‌ವಾದಿಗಳು. ವಾಮಪಂಥೀಯ ಶಕ್ತಿಗಳು ನಡೆಸಿದ ವ್ಯವಸ್ಥಿತ ಅಪಪ್ರಚಾರಗಳ ಪರಿಣಾಮವಾಗಿ ಧರ್ಮ ಮತ್ತು ಸಂಸ್ಕೃತಿಗಳ ಕುರಿತು ಜನಮಾನಸದಲ್ಲಿ ಒಂದು ರೀತಿಯ ಭ್ರಮೆ ಗೊಂದಲಗಳು ಮನೆಮಾಡಿವೆ. ಆಧುನಿಕ ಪೀಳಿಗೆಯನ್ನೂ ಇವು ಗಾಢವಾಗಿ ಪ್ರಭಾವಿಸುತ್ತಿವೆ. ಹಂಸ–ಕ್ಷೀರ ನ್ಯಾಯದಂತೆ ಇದನ್ನು ಸ್ಪಷ್ಟವಾಗಿ ವಿಶ್ಲೇಷಿಸಿ, ಆ ಮೂಲಕ ಈ ಎಲ್ಲ ಗೊಂದಲಗಳನ್ನು ದೂರ ಮಾಡಬೇಕಾದ ತುರ್ತು ಅಗತ್ಯವಿದೆ.

ಆದರಣೀಯ ರಂಗಾ ಹರಿಯವರು ಈ ಪುಸ್ತಕದ ಮೂಲಕ ಆ ಪ್ರಯತ್ನವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಧರ್ಮ ಮತ್ತು ಸಂಸ್ಕೃತಿಗಳ ಮೂಲ ತಿರುಳಿನ ನೈಜ ದರ್ಶನವಾಗುವಂತೆ ಅದನ್ನು ಎಳೆಎಳೆಯಾಗಿ ಬಿಡಿಸಿ ತೋರಿದ್ದಾರೆ. ಜನಸಾಮಾನ್ಯರಿಗೂ ಸುಲಭವಾಗಿ ಮನದಟ್ಟಾಗುವಂತೆ ವಿವರಿಸಿದ್ದಾರೆ. ಇಂತಹ ಗಂಭೀರ ವಿಷಯಗಳನ್ನು ಸರಳವಾಗಿ ತಿಳಿಯಾಗಿ ಓದಿಸಿಕೊಂಡು ಹೋಗುವಂತಹ ಪುಸ್ತಕಗಳು ಇದುವರೆಗೆ ಹೊರಬಂದಿಲ್ಲ ಎಂಬ ಕೊರತೆಯನ್ನೂ ಈ ಮೂಲಕ ನೀಗಿಸಿದ್ದಾರೆ.

ರಂಗಾ ಹರಿಯವರ 'ಪಥಿಕ್ ಔರ್ ಪಾಥೇಯ' ಪುಸ್ತಕವನ್ನು ಕನ್ನಡಕ್ಕೆ ಶ್ರೀ ಕೃಷ್ಣಪ್ರಸಾದ ಬದಿ ಅವರು ಅನುವಾದಿಸಿದ್ದಾರೆ.

ವೆಬ್‌ಸೈಟ್ : https://www.sahityabooks.com/

## ಸೇವಾಗಾಥಾ  ಡೋಂಗ್ರಿಪಾಡ ಸೇವಾಬಸ್ತಿಯ ಜೀವಸೆಲೆಯಾದ 'ಕೇಶವ ಸೃಷ್ಟಿ'

ಮುಂಬೈಯಿಂದ ಕೇವಲ 80 ಕಿ. ಮೀ. ದೂರದಲ್ಲಿರುವ ಪಾಲ್ಘರ್ ಜಿಲ್ಲೆಯ ಡೋಂಗ್ರಿಪಾಡ ಹಳ್ಳಿಯಲ್ಲಿ ನೀರಿಗಾಗಿ ಏಳು ದಶಕಗಳ ಕಾಯುವಿಕೆ ಕೊನೆಗೊಂಡಿದೆ. ಕಳೆದ 72 ವರ್ಷಗಳಿಂದ ಕುಡಿಯುವ ನೀರಿನ ನಿರೀಕ್ಷೆಯಲ್ಲಿದ್ದರು. ಗರ್ಭಿಣಿ ಮಹಿಳೆಯಾಗಿರಬಹುದು 12 ವರ್ಷದ ಬಾಲಕಿಯೇ ಇರಬಹುದು, ಬೆಟ್ಟದ ಮೇಲೆ ಇರುವ ಡೊಂಗ್ರಿಪಾಡ ಹಳ್ಳಿಯಿಂದ ಉಬ್ಬು ತಗ್ಗಾದ ರಸ್ತೆಯಲ್ಲಿ ಒಂದೂವರೆ ಕಿ.ಮೀ ದೂರ ಕೆಳಗಿದ್ದ ಬಾವಿಯಿಂದ ನೀರು ತರುವುದು ಅನಿವಾರ್ಯವಾಗಿತ್ತು. ಹಾಗೆಯೇ ಮಳೆಗಾಲದಲ್ಲಂತೂ ಓಡಾಡುವ ರಸ್ತೆಯೂ ಮುಚ್ಚಿಹೋಗುತ್ತಿತ್ತು. ನೀರು, ವಿದ್ಯುತ್ ಹಾಗೂ ಸರ್ಕಾರಿ ಶಾಲೆಯೂ ಇಲ್ಲದ 33 ಪರಿವಾರಗಳ ಈ ಸೇವಾಬಸ್ತಿಯಲ್ಲಿ ಕೇವಲ 7 ರೈತರು ತಮ್ಮ ಗದ್ದೆಗಳಲ್ಲಿ ಬೇಸಾಯ ಮಾಡಬಹುದಾಗಿತ್ತು. ಆದರೆ ಇಂದು ಈ ಹಳ್ಳಿಯ ಚಿತ್ರಣ ಸಂಪೂರ್ಣವಾಗಿ ಬದಲಾಗಿದೆ




ಈ ಬದಲಾವಣೆ ಸಾಧ್ಯವಾಗಿದ್ದು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕರಾದ ಡಾ.ಕೇಶವ ಬಲಿರಾಮ್ ಹೆಡ್ಗೇವಾರ್ ಅವರ ಸ್ಮರಣಾರ್ಥವಾಗಿ ಭಯಂದರ್‌ನಲ್ಲಿರುವ "ಕೇಶವ ಸೃಷ್ಟಿ" ಎಂಬ ಬಹುಮುಖಿ ಪ್ರಕಲ್ಪದಿಂದ ನಡೆಯುತ್ತಿರುವ ಗ್ರಾಮವಿಕಾಸ ಯೋಜನೆಯಿಂದ. ಒಂದೂವರೆ ಕಿ.ಮೀ. ಕೆಳಗೆ ಇದ್ದ ಬಾವಿಯಿಂದ ನೀರಿನ ಟ್ಯಾಂಕ್ ತನಕ ಪೈಪ್ ಲೈನ್ ಹಾಗೂ ಮನೆ ಮನೆಗೂ ನೀರನ್ನು ತಲುಪಿಸುವ ಹಾಗೂ ಸೋಲಾರ್ ಪ್ಯಾನೆಲ್‌ಗಳನ್ನು ಅಳವಡಿಸುವ ಕೆಲಸವನ್ನು ಪುಣೆಯ ಗ್ರಾಮ್ ಉರ್ಜಾ ಎಂಬ ಖಾಸಗಿ ಕಂಪೆನಿಯು ಮಾಡಿತು. ಹಾಗೆ ಈ ಎಲ್ಲಾ ಬದಲಾವಣೆಗಳಿಗೆ ಹಳ್ಳಿಗರ ಸಹಾಯವೂ ದೊರೆಯಿತು ಎಂದು ಡೊಂಗ್ರಿಪಾಡ ಗ್ರಾಮದ ವಿಕಾಸ ಯಾತ್ರೆಯ ಶಿಲ್ಪಿಯಾದ ಮುಂಬೈ ಮಹಾನಗರದ ಹಿಂದಿನ ಕಾರ್ಯವಾಹರಾದ ವಿಮಲ್ ಕೇಡಿಯಾ ಅವರು ಹೇಳುತ್ತಾರೆ. ಹಳ್ಳಿಯ ಜನ ಒಂದು ಸಮಿತಿಯನ್ನು ರಚಿಸಿ ಒಂದು ನಿಶ್ಚಿತ ಮೊತ್ತವನ್ನು ಈ ಎಲ್ಲಾ ಕೆಲಸಗಳಿಗಾಗಿ ಠೇವಣಿ ಮಾಡಲು ನಿರ್ಧರಿಸಿದರು. ಈ ಪ್ರಮುಖ ವೆಚ್ಚದ ನಂತರ ಗ್ರಾಮವಾಸಿಗಳು ಕೇಶವ ಸೃಷ್ಟಿಯಿಂದ ಏನನ್ನೂ ತೆಗೆದುಕೊಳ್ಳಲಿಲ್ಲ, ನದಿಯಿಂದ ಹೊಲಗಳಿಗೆ ನೀರನ್ನು ಹಾಯಿಸುವ ವ್ಯವಸ್ಥೆ ಹಾಗೂ ಮುಂದಿನ ಎಲ್ಲಾ ನಿರ್ವಹಣೆಯ ವೆಚ್ಚವನ್ನು ಹಳ್ಳಿಗರೇ ಬರಿಸಲು ನಿರ್ಧರಿಸಿದರು.

ಈಗ ಡೊಂಗ್ರಿಪಾಡದಲ್ಲಿ ವಿಕಾಸದ ಧಾರೆ ಹರಿಯುತ್ತಿದೆ. ಹಳ್ಳಿಯ ಮಧ್ಯದಲ್ಲಿರುವ ಸಮಾಜ ಮಂದಿರ ಎನ್ನುವ ಸಮುದಾಯ ಭವನದಲ್ಲಿ ಮಹಿಳೆಯರಿಗೆ ಹೊಲಿಯುವ ತರಬೇತಿಯನ್ನು ನೀಡಲಾಗುತ್ತಿದೆ. 2 ಕಂಪ್ಯೂಟರ್‌ನಿಂದ ಮಕ್ಕಳಿಗೆ ಸದ್ಯಕ್ಕೆ ಆರಂಭಿಕ ಕಂಪ್ಯೂಟರ್ ತರಬೇತಿಯನ್ನು ನೀಡಲಾಗುತ್ತಿದೆ. ಗ್ರಾಮವಾಸಿಗರಿಗೆ ಈ ಸಮಾಜ ಮಂದಿರವು ಪೂಜಾ ಸ್ಥಳವಿದ್ದಂತೆ ಎಂದು ಡೊಂಗ್ರಿಪಾಡ ಹಾಗೂ ಇನ್ನೂ ಹತ್ತು ಹಳ್ಳಿಗಳ ಅಭಿವೃದ್ಧಿಗಾಗಿ ವಿಸ್ತಾರಕರಾಗಿ ಹೊರಟ ಸಚಿನ್ ಅವರು ಹೇಳುತ್ತಾರೆ. ಪ್ರತೀ ವಾರ ಇಲ್ಲಿ ನಡೆಯುವ ಸತ್ಸಂಗದಿಂದ ನಿಧಾನವಾಗಿ ಇಡೀ ಹಳ್ಳಿ ವ್ಯಸನ ಮುಕ್ತವಾಗುತ್ತಿದೆ. ನಿಯಮಿತವಾಗಿ ಮದ್ಯ ಸೇವಿಸುತ್ತಿದ್ದ ವನವಾಸಿ ಪರಿವಾರಗಳು ಹೆಚ್ಚು ಕಡಿಮೆ ಮದ್ಯ ಸೇವನೆಯನ್ನು ತ್ಯಜಿಸಿದ್ದಾರೆ ಹಾಗೂ ತಮ್ಮ ಗದ್ದೆಗಳಲ್ಲಿ ಅಕ್ಕಿ, ತರಕಾರಿಗಳನ್ನು ಬೆಳೆದು ಈಗ ವರ್ಷಕ್ಕೆ ಒಂದರಿಂದ ಒಂದೂವರೆ ಲಕ್ಷದಷ್ಟು ಹಣವನ್ನು ಸಂಪಾದಿಸುತ್ತಿದ್ದಾರೆ. ಹಳ್ಳಿಯ ಮಧ್ಯದಲ್ಲಿ ಎತ್ತರದಲ್ಲಿ ಇರುವ ಟ್ಯಾಂಕ್ ನಿಂದಾಗಿ ಈಗ ವರ್ಷಪೂರ್ತಿ ನೀರಿನ ಸಮಸ್ಯೆ ಇಲ್ಲವಾಗಿದೆ. ಪ್ರತಿಷ್ಠಿತ ಲೇಖಕರಾದ ರತನ್ ಶಾರದಾ ಜೀಯವರು ಡೊಂಗ್ರಿಪಾಡದ ಈ ವಿಕಾಸಯಾತ್ರೆಗೆ ಅಕ್ಷರ ರೂಪ ನೀಡಲು ಅಲ್ಲಿಗೆ ಬಂದಾಗ ಅವರ ಪತ್ನಿ ಶ್ಯಾಮಾಜಿ ಕುತೂಹಲದಿಂದ ಅಲ್ಲಿನ ಮಹಿಳೆಯರಲ್ಲಿ ನಿಮಗೆ ಮುಂದೆ ಇನ್ನೇನು ಬೇಕು? ಎಂದು ಕೇಳಿದಾಗ ಅಲ್ಲಿನ ವನವಾಸಿ ಪರಿವಾರಗಳು "ನಮಗೆ ಏನು ಬೇಕಿತ್ತೋ ಅದೆಲ್ಲವೂ ಸಿಕ್ಕಿದೆ, ಇನ್ನು ನಮ್ಮ ಮುಂದಿನ ದಾರಿಯನ್ನು ನಾವೇ ನಿರ್ಧರಿಸುತ್ತೇವೆ" ಎಂದು ಹೇಳಿದ ಈ ಒಂದು ಘಟನೆ ಸಾಕು ಡೊಂಗ್ರಿಪಾಡ ಗ್ರಾಮದ ಪರಿವರ್ತನೆಯನ್ನು ಅರ್ಥಮಾಡಿಕೊಳ್ಳಲು. •

ಸಂಪಾದಕೀಯ ಸಹಕಾರ: ಡಾ. ಭಾಗ್ಯಲಕ್ಷ್ಮಿ ಬಿ.ಜಿ., ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಮೇಘಾ ಪ್ರಮೋದ್, ದೀಕ್ಷಿತ್ ನಾಯರ್ ಮಂಡ್ಯ, ಸುಲಕ್ಷಣಾ

# ಪಂಚರತ್ನಗಳಿಗೆ 'ಭಾರತರತ್ನ'ದ ಹಿರಿಮೆ


### ಹೊಸ ಶಕೆಗೆ ನಾಂದಿ ಹಾಡಿದ್ದ ನರಸಿಂಹರಾವ್



ಪಿ. ವಿ ನರಸಿಂಹರಾವ್ ಅವರನ್ನು ಭಾರತ 'ಚಾಣಕ್ಯ' ಎಂದು ಕರೆಯಿತು. ಹಲವು ವ್ಯಕ್ತಿಗಳು ಅವರನ್ನು "ರೈಟ್ ಪರ್ಸನ್ ಇನ್ ರಾಂಗ್ ಪಾರ್ಟಿ" ಎಂದು ಕರೆದರು. ನರಸಿಂಹರಾವ್ ಅಸಾಧ್ಯವಾದುದನ್ನು ಸಾಧ್ಯವಾಗಿಸಿದವರು. ಭಾರತ ದೇಶವನ್ನು ಆರ್ಥಿಕವಾಗಿ ಸದೃಢಗೊಳಿಸಿದವರು. ಭಾರತ ದೇಶದ 9ನೇ ಪ್ರಧಾನಮಂತ್ರಿಯಾಗಿ (1991–1996) ಅಧಿಕಾರದ ಚುಕ್ಕಾಣಿ ಹಿಡಿದ ನರಸಿಂಹರಾವ್ ತಮ್ಮ ಅವಧಿಯಲ್ಲಿ ಭಾರತ ದೇಶ ದಿವಾಳಿಯಾಗುವುದನ್ನು ತಪ್ಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದರು. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಸಾಲ ಪಡೆದು ದೇಶವನ್ನು ಆರ್ಥಿಕವಾಗಿ ಬಲಗೊಳಿಸಿದ್ದರು. ದೇಶದಲ್ಲಿನ ಸಾಕಷ್ಟು ಅಡೆತಡೆಗಳನ್ನು ಮೆಟ್ಟಿ ನಿಂತು ಉದಾರೀಕರಣವನ್ನು ಅನುಷ್ಠಾನಗೊಳಿಸಿ ದೇಶವನ್ನು ಸಂಪೂರ್ಣವಾಗಿ ಆರ್ಥಿಕ ಸಂಕಷ್ಟದಿಂದ ಹೊರ ತಂದಿದ್ದರು. ಹಾಗೆಯೇ ರಾವ್ ವಿದೇಶಿ ನೆಲದಲ್ಲಿ ಭಾರತ ತಲೆ ಎತ್ತಿ ನಿಲ್ಲುವಂತೆ ಮಾಡಿದವರು. ಅಷ್ಟೇ ಅಲ್ಲದೆ ನರಸಿಂಹರಾವ್ ತಮ್ಮ ಅಧಿಕಾರದ ಅವಧಿಯಲ್ಲಿ ದೇಶದಲ್ಲಿ ಅತೀ ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಟ್ಟ ವ್ಯಕ್ತಿ. ನರಸಿಂಹರಾವ್ ಮಹತ್ವಕಾಂಕ್ಷಿ ನಾಯಕ ಮಾತ್ರವಲ್ಲ. ಅಭಿಜಾತ ಪ್ರತಿಭೆಯನ್ನು ಹೊಂದಿದ್ದ ಸಾಧಕ.


ರಾವ್ ಅವರಿಗೆ 15 ಭಾಷೆಗಳ ಮೇಲೆ ಹಿಡಿತವಿತ್ತು. ಸಾಹಿತ್ಯ ರಚನೆಯಲ್ಲಿ ಸಂಪೂರ್ಣ ಆಸಕ್ತಿ ಇದ್ದ ಅವರು ಸಾಕಷ್ಟು ಕೃತಿಗಳನ್ನು ಬರೆದಿದ್ದರು. ತೆಲಂಗಾಣದ ಸಣ್ಣ ಗ್ರಾಮದಲ್ಲಿ ಹುಟ್ಟಿ ರಾಜಕೀಯ ಪ್ರವೇಶಿಸಿ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿ ಮುಂದೆ ದೇಶದ ಪ್ರಧಾನಮಂತ್ರಿ ಆಗುವವರೆಗೂ ರಾವ್ ಎದುರಿಸಿದ ಸಮಸ್ಯೆಗಳು ಹಲವಾರು.

### ರೈತರ ಕಣ್ಮಣಿ ಚರಣ್ ಸಿಂಗ್



ಚೌಧರಿ ಚರಣ್ ಸಿಂಗ್ ಭಾರತ ದೇಶದ ಅಲ್ಪಾವಧಿಯ ಪ್ರಧಾನಮಂತ್ರಿಯಾಗಿದ್ದರು. ಎರಡನೇ ಕಾಂಗ್ರೆಸ್ಸೇತರ ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದ ಅವರು ಅದಕ್ಕೂ ಮೊದಲು ಉತ್ತರ ಪ್ರದೇಶದಲ್ಲಿ ಎರಡು ಅವಧಿಗೆ ಮುಖ್ಯಮಂತ್ರಿಯಾಗಿದ್ದರು. ಬಾಲ್ಯದಲ್ಲಿಯೇ ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದರು. ದಯಾನಂದ ಸರಸ್ವತಿ, ಮಹಾತ್ಮ ಗಾಂಧಿ ಮತ್ತು ಸರ್ದಾರ್ ವಲ್ಲಭಾಯಿ ಪಟೇಲ್ ಅವರಿಂದ ಪ್ರೇರೇಪಿತರಾಗಿದ್ದರು. ಒಂದಿಷ್ಟು ಉದ್ದೇಶಗಳನ್ನಿಟ್ಟುಕೊಂಡು ರಾಜಕೀಯ ಜೀವನಕ್ಕೆ ಪದಾರ್ಪಣೆ ಮಾಡಿದ್ದ ಚರಣ್ ಸಿಂಗ್ ಹತ್ತಾರು ಖಾತೆಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಿದವರು. ನಬಾರ್ಡ್ ನಂತಹ ಸಂಸ್ಥೆಗಳನ್ನು ರಚಿಸಿ ದೇಶದ ಗ್ರಾಮೀಣ ಭಾಗವನ್ನು ಸದೃಢಗೊಳಿಸಿದವರು. ಭೂ ಹಿಡುವಳಿ ಬಲವರ್ಧನೆ ಕಾಯ್ದೆ, ಉತ್ತರ ಪ್ರದೇಶದ ಜಮೀನ್ದಾರಿ ಮತ್ತು ಭೂ ಸುಧಾರಣೆ ಕಾಯ್ದೆ ಜಾರಿಗೊಳಿಸಿ ರಾಜ್ಯದಲ್ಲಿನ ಜಮೀನ್ದಾರಿ ವ್ಯವಸ್ಥೆಯನ್ನು ಸದ್ದಿಲ್ಲದೆ ರದ್ದು ಮಾಡಿದ್ದರು. ಚರಣ್ ಸಿಂಗ್ ಅವರ ಭೂ ಸುಧಾರಣಾ ಕಾಯಿದೆ ಲಕ್ಷಾಂತರ ರೈತರಿಗೆ ನೆರವಾಯಿತು. ರೈತರು ಸಶಕ್ತರಾದರು. ಭೂಮಿ ಇಲ್ಲದವರಿಗೆ ಭೂಮಿ ದೊರೆಯಿತು. ರೈತರ ಆರ್ಥಿಕ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸಿ ಕೊಟ್ಟಿದ್ದ ಚರಣ್ ಸಿಂಗ್ ನಿಜಕ್ಕೂ ರೈತ ನಾಯಕ. ಅವರ ಜನ್ಮದಿನವನ್ನು ಈ ದೇಶ ರಾಷ್ಟ್ರೀಯ ರೈತರ ದಿನವನ್ನಾಗಿ ಆಚರಿಸುತ್ತದೆ.


### ಸರಳತೆಗೆ ಅನ್ವರ್ಥವಾಗಿ ಬದುಕಿದ್ದ ಕರ್ಪೂರಿ



"ನನ್ನ ಜನರು ಒಳ್ಳೆಯ ಬಟ್ಟೆಗಳನ್ನು ತೊಡುವವರೆಗೂ ನಾನು ದುಬಾರಿ ಬಟ್ಟೆಗಳನ್ನು ಹಾಕುವುದಿಲ್ಲ" ಎಂದವರು ಕರ್ಪೂರಿ ಠಾಕೂರ್. ಅವರು ಬೆರಳೆಣಿಕೆಯ ಕುರ್ತಾಗಳನ್ನು ಧರಿಸಿಯೇ ತಮ್ಮ ಜೀವಿತಾವಧಿಯನ್ನು ಮುಗಿಸಿದವರು. ಎರಡು ಬಾರಿಗೆ ಮುಖ್ಯಮಂತ್ರಿ ಆಗಿ ಆಯ್ಕೆಯಾದರೂ ಅವರ ಬಳಿ ಸ್ವಂತಕ್ಕೆ ಒಂದು ಮನೆ ಇರಲಿ ಸಣ್ಣ ವಾಹನವೂ ಇರಲಿಲ್ಲ. ಸ್ವಾತಂತ್ರ್ಯ ಹೋರಾಟಗಾರನಾಗಿ, ಸಮಾಜವಾದಿ ಆಂದೋಲನದ ಪ್ರಬಲ ಧ್ವನಿಯಾಗಿ ಗುರುತಿಸಿಕೊಂಡಿದ್ದ ಜನನಾಯಕ. ಕರ್ಪೂರಿ ಅವರು ಸದಾ ಹರಿದ ಕೋಟ್ ಧರಿಸಿ ರಿಕ್ಷಾದಲ್ಲಿ ಓಡಾಡುತ್ತಾ ಹಿಂದುಳಿದ ವರ್ಗ, ದೀನರು ಮತ್ತು ದಲಿತರ ಉದ್ಧಾರಕ್ಕಾಗಿ ಒಬ್ಬ ಪ್ರಾಮಾಣಿಕ ಸೇವಕನಾಗಿ ದುಡಿದ ಮತ್ತು ಮಿಡಿದ ಅಪ್ಪಟ ವ್ಯಕ್ತಿ. ಅವರಲ್ಲಿ ಅಧಿಕಾರದ ವಾಂಛೆ ಇರಲಿಲ್ಲ. ಹಣ ಬಲವಿರಲಿಲ್ಲ. ತಮ್ಮ ಕುಟುಂಬವನ್ನು ಅಧಿಕಾರದ ಸಿಂಹಾಸನದಲ್ಲಿ ಕೂರಿಸುವ ಆಸೆಯಂತು ಲವಲೇಶವೂ ಇರಲಿಲ್ಲ.

ಒಬ್ಬ ಬಡ ಕ್ಷೌರಿಕನ ಮಗನಾಗಿ ಹುಟ್ಟಿ ಒಂದು ರಾಜ್ಯದ ಮುಖ್ಯಮಂತ್ರಿಯಾಗಿ ಆ ರಾಜ್ಯದಲ್ಲಿ (ಬಿಹಾರ) ಪ್ರಬಲ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಗಟ್ಟಿಯಾದ ತಳಹದಿ ಹಾಕಿದವರು ಕರ್ಪೂರಿ ಠಾಕೂರ್. ಹಿಂದುಳಿದ ವರ್ಗದವರಿಗೆ ನಿರಂತರ ಹೋರಾಟದಿಂದ ಮೊದಲನೇ ಬಾರಿಗೆ ಮೀಸಲಾತಿ ದೊರಕಿಸಿ ಕೊಟ್ಟವರು. ಹಿಂದುಳಿದ ವರ್ಗಗಳ ರಾಜಕಾರಣದ ತಾತ್ವಿಕತೆ, ಸಾಧ್ಯತೆಗಳನ್ನು ವಿಸ್ತರಿಸಿದ ಅವರು ಹಿಂದುಳಿದವರು ಅಧಿಕಾರ ಹಿಡಿಯುವ ಸಮೀಕರಣಗಳನ್ನು ಅಚ್ಚುಕಟ್ಟಾಗಿ ರೂಪಿಸಿದ್ದರು. ಕರ್ಪೂರಿ ಹತ್ತಾರು ಯೋಜನೆಗಳ ಮೂಲಕ ಹಿಂದುಳಿದಿದ್ದ ಬಿಹಾರ ರಾಜ್ಯವನ್ನು ಮುನ್ನೆಲೆಗೆ ತಂದವರು. ರಾಜ್ಯದಲ್ಲಿ ಮದ್ಯ ನಿಷೇಧ ಮಾಡುವ ಮೂಲಕ ಕರ್ಪೂರಿ ಹೆಚ್ಚು ಹೆಸರುವಾಸಿಯಾಗಿದ್ದರು. 'ಸ್ವ' ಕಾರ್ಯಕ್ಕೆ ಆಸೆಪಡದ, ಅಹರ್ನಿಶಿ ತಮ್ಮ ಸಮುದಾಯದ ಏಳ್ಗೆಗಾಗಿ ಕೆಲಸ ಮಾಡಿದವರು.

### ದೇಶ ಮೊದಲು ಎಂದು ನಂಬಿರುವ ವ್ಯಕ್ತಿ



ಮೂರು ದಶಕಗಳ ಹಿಂದೆ "ರಾಮ ಮಂದಿರ ಕಟ್ಟಿಯೇ ತೀರುತ್ತೇವೆ. ರಾಮ ಮತ್ತೆ ಬರುತ್ತಾನೆ"ಎಂಬ ರೋಮಾಂಚನಕಾರಿ ಭಾಷಣವನ್ನು ಮಾಡಿ ರಾಮ ರಥಯಾತ್ರೆಯ ಮೂಲಕ ಲಕ್ಷಾಂತರ ಕರಸೇವಕರಲ್ಲಿ ಆತ್ಮವಿಶ್ವಾಸವನ್ನು ತುಂಬಿ ಇಡೀ ಭಾರತೀಯರನ್ನು ಒಗ್ಗೂಡಿಸಿದವರು ಲಾಲ್ ಕೃಷ್ಣ ಅಡ್ವಾಣಿ. ಅಡ್ವಾಣಿ ರಾಷ್ಟ್ರೀಯತೆ, ಧರ್ಮ, ಸಂಸ್ಕೃತಿ ಮತ್ತು ಪರಂಪರೆಯ ಉಳಿವಿಗಾಗಿ ದನಿ ಎತ್ತಿದವರು. ಭಾರತ ದೇಶದ ರಾಜಕೀಯ ಚಿತ್ರಣವನ್ನೇ ಬದಲಾಯಿಸಿದವರು.

ಬಿಜೆಪಿ ಹಿರಿಯ ನಾಯಕ, ರಾಜಕೀಯ ಭೀಷ್ಮ ಎಂದು ಕರೆಸಿಕೊಳ್ಳುವ ಮುತ್ಸದ್ದಿ ಲಾಲ್ ಕೃಷ್ಣ ಅಡ್ವಾಣಿ ಒಂದು ಅರ್ಥದಲ್ಲಿ ದೇಶಕ್ಕೆ ಹೊಸ ದಿಕ್ಕನ್ನು ತೋರಗೊಟ್ಟವರು. ಬಾಲ್ಯದಲ್ಲಿಯೇ ಆರ್‌ಎಸ್‌ಎಸ್ ಸ್ವಯಂಸೇವಕನಾಗಿ, ಭಾರತ ಬಿಟ್ಟು ತೊಲಗಿ ಚಳವಳಿಯ ಸಮಯದಲ್ಲಿ ನ್ಯಾಷನಲ್ ಕಾಲೇಜಿಗೆ ಪ್ರವೇಶ ಪಡೆದು ಮುಂದೆ ಆರ್‌ಎಸ್‌ಎಸ್ ಪ್ರಚಾರಕರಾಗಿ ಕಾರ್ಯನಿರ್ವಹಿಸಿದ್ದರು. ಜನಸಂಘದ ರಾಜ್ಯ ಕಾರ್ಯದರ್ಶಿಯಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾ ರಾಜ್ಯಸಭೆಯನ್ನು ಪ್ರವೇಶಿಸಿದ್ದರು. ಬಿಜೆಪಿ ಪಕ್ಷದ ಸ್ಥಾಪಕರಲ್ಲಿ ಒಬ್ಬರಾಗಿ ಪಕ್ಷದ ಅಧ್ಯಕ್ಷರಾಗಿಯೂ ಎರಡಂಕಿ ಸ್ಥಾನದಿಂದ ಪಕ್ಷವನ್ನು ಅಧಿಕಾರಕ್ಕೆ ತರುವವರೆಗೂ ಕಾಯ ವಾಚ ಮನಸ ಪರಿಶುದ್ಧವಾಗಿ ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡಿದವರು ಅಡ್ವಾಣಿ. ಮಾಹಿತಿ ಮತ್ತು ಪ್ರಸಾರ ಖಾತೆಯ ಸಚಿವರಾಗಿ, ದೇಶದ ಗೃಹ ಮಂತ್ರಿಯಾಗಿ ಮತ್ತು ಉಪ ಪ್ರಧಾನಮಂತ್ರಿಯಾಗಿಯೂ ಅಡ್ವಾಣಿ ದೇಶದ ಪ್ರಸಿದ್ಧ ನಾಯಕ ಎನಿಸಿಕೊಂಡವರು. ಬಹು ಮುಖ್ಯವಾಗಿ ಅವರ ರಾಮ ರಥಯಾತ್ರೆ ಕೋಟ್ಯಾಂತರ ಸಂಖ್ಯೆಯ ಹಿಂದೂಗಳಲ್ಲಿ ಒಂದು ಕನಸಿನ ಬೀಜವನ್ನು ಬಿತ್ತಿತ್ತು. ಅಯೋಧ್ಯೆಯಲ್ಲಿ ರಾಮಮಂದಿರದ ಕನಸನ್ನು ಕಂಡಿದ್ದ ಮತ್ತು ಅದರ ಸ್ಥಾಪನೆಗಾಗಿ ತಮ್ಮ ಇಡೀ ಬದುಕನ್ನೇ ಅರ್ಪಿಸಿದ ರಾಮ ಭಕ್ತನಿಗೆ ಮತ್ತು ದೇಶ ಭಕ್ತನಿಗೆ ಈ ವರ್ಷದ ಭಾರತ ರತ್ನ ಪ್ರಶಸ್ತಿ ದೊರೆತಿದೆ.

### ನಿಷ್ಠೆಯಿಂದ 'ಸ್ವಾಮಿ' ಕಾರ್ಯ ಮಾಡಿದ್ದ ಸಾಧಕ



ಡಾ. ಎಂ ಎಸ್ ಸ್ವಾಮಿನಾಥನ್ ಭಾರತದ ಕೃಷಿ ಕ್ಷೇತ್ರವನ್ನು ಸಂಪೂರ್ಣವಾಗಿ ಬಲಗೊಳಿಸಿದವರು. ಸ್ವಾಮಿನಾಥನ್ ದೇಶದ ಹಸಿರು ಕ್ರಾಂತಿಯ ಪಿತಾಮಹ ಎಂದೇ ಪ್ರಸಿದ್ಧರು. ಅವರು ಒಬ್ಬ ಕೃಷಿ ವಿಜ್ಞಾನಿಯಾಗಿ ರೈತರ ಅಭಿವೃದ್ಧಿಗಾಗಿ ಮಾಡಿದ ಕೆಲಸಗಳು ಅಪಾರ. ಭಾರತ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವಲ್ಲಿ ಅವರ ಪಾತ್ರ ಬಹುಮುಖ್ಯವಾದುದು. ಅದರಲ್ಲೂ 1960 ಮತ್ತು 70 ರ ದಶಕದಲ್ಲಿ ಭಾರತದಲ್ಲಿ ಕೃಷಿ ವಲಯದಲ್ಲಿ ಆದ ದಿಢೀರ್ ಪ್ರಗತಿ ಮತ್ತು ಬದಲಾವಣೆಗೆ ಎಂ ಎಸ್ ಸ್ವಾಮಿನಾಥನ್ ಅವರೇ ಕಾರಣ. ವಿಶೇಷವಾಗಿ ಭಾರತದಲ್ಲಿ ಹಸಿರು ಕ್ರಾಂತಿಗೆ ಆಧಾರವಾಗಿರುವ ಮೂಲಭೂತ ಕಾರ್ಯತಂತ್ರದ ದೃಷ್ಟಿ, ಹೊಸ ಅನುವಂಶಿಕ ತಳಿ ಅಥವಾ ಹೆಚ್ಚಿದ ರಸಗೊಬ್ಬರ ಮತ್ತು ನೀರಿನ ಬಳಕೆಗೆ ಸ್ಪಂದಿಸುವ 'ಸಸ್ಯ ಪ್ರಕಾರ' ವನ್ನು ರೈತರಿಗೆ ಪರಿಚಯಿಸಿದ್ದು ಸ್ವಾಮಿನಾಥನ್. ಅವರು ಭಾರತ ದೇಶ ಮತ್ತು ವಿದೇಶಗಳಲ್ಲಿ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಹಲವಾರು ಸಂಸ್ಥೆಗಳಲ್ಲಿ ಸ್ವಾಮಿನಾಥನ್ ಸೇವೆ ಸಲ್ಲಿಸಿದ್ದರು. ಇನ್ನು ಸ್ವಾಮಿನಾಥನ್ ಅವರ ವಿಭಿನ್ನ ಪ್ರಯತ್ನಗಳು ಗೋಧಿ ಮತ್ತು ಅಕ್ಕಿಯ ಹೆಚ್ಚಿನ ಇಳುವರಿ ತಳಿಗಳ ಅಭಿವೃದ್ಧಿಯನ್ನು ಒಳಗೊಂಡಿತ್ತು. ಅದು ಭಾರತದಾದ್ಯಂತ ಆಹಾರ ಧಾನ್ಯ ಉತ್ಪಾದನೆಯನ್ನು ಸಹಜವಾಗಿ ಹೆಚ್ಚಿಸಿತು.

ತಮಿಳುನಾಡಿನ ಸಾಮಾನ್ಯ ಕುಟುಂಬದಲ್ಲಿ ಜನಿಸಿದ್ದ ಸ್ವಾಮಿನಾಥನ್ ಕೃಷಿ ಕ್ಷೇತ್ರದಲ್ಲಿ ಹುಬ್ಬೇರಿಸುವಂತಹ ಸಾಧನೆ ಮಾಡಿದ್ದರು. ಸ್ವಾಮಿನಾಥನ್ ಅವರನ್ನು ಜಾಗತಿಕ ಪ್ರಭಾವಿ ವ್ಯಕ್ತಿಗಳಲ್ಲಿ ಒಬ್ಬರು ಎಂದೂ ಗುರುತಿಸಲಾಗಿದೆ. ಡಾ. ಎಂ ಎಸ್ ಸ್ವಾಮಿನಾಥನ್ ಅವರಿಗೆ ಮರಣೋತ್ತರವಾಗಿ ಈ ವರ್ಷದ ಭಾರತ ರತ್ನ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

# ಸಾಲುದ್ದದ ಸುದ್ದಿಗಳು

### ಚುನಾವಣಾ ಪ್ರಚಾರಕ್ಕೆ ಮಕ್ಕಳನ್ನು ಬಳಸುವಂತಿಲ್ಲ: ಚುನಾವಣಾ ಆಯೋಗ

ಭಾರತೀಯ ಚುನಾವಣಾ ಆಯೋಗ (ಇಸಿಐ) ಲೋಕಸಭೆ ಚುನಾವಣೆಗೆ ಮುಂಚಿತವಾಗಿ ಕೆಲವೊಂದು ಸಲಹೆಯನ್ನು ನೀಡಿದ್ದು, ಪೋಸ್ಟರ್‌ಗಳು ಮತ್ತು ಕರಪತ್ರಗಳ ಹಂಚುವಿಕೆ ಅಥವಾ ಘೋಷಣೆ ಕೂಗುವಿಕೆ ಒಳಗೊಂಡಂತೆ ಯಾವುದೇ ಚುನಾವಣಾ ಪ್ರಚಾರಕ್ಕೆ ಮಕ್ಕಳನ್ನು ಬಳಸಿಕೊಳ್ಳದಂತೆ ರಾಜಕೀಯ ಪಕ್ಷಗಳಿಗೆ ಸೂಚನೆಯನ್ನು ನೀಡಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಪಕ್ಷಗಳು ಮತ್ತು ಅಭ್ಯರ್ಥಿಗಳು ಯಾವುದೇ ರೀತಿಯಲ್ಲಿ ಮಕ್ಕಳನ್ನು ಬಳಸಿಕೊಂಡ ವಿಚಾರದಲ್ಲಿ "ಶೂನ್ಯ ಸಹಿಷ್ಣುತೆ" ನೀತಿಯನ್ನು ಅನುಸರಿಸುವುದಾಗಿ ಚುನಾವಣಾ ಆಯೋಗವು ತಿಳಿಸಿದೆ. ಕವಿತೆಗಳು, ಹಾಡುಗಳು, ಮಾತುಗಳ ಮೂಲಕ ವಿರೋಧಿಗಳನ್ನು ಟೀಕೆ ಮಾಡಲು, ರಾಜಕೀಯ ಪಕ್ಷ ಅಥವಾ ಅಭ್ಯರ್ಥಿಯ ಚಿಹ್ನೆಗಳ ಪ್ರದರ್ಶ ಮಾಡಲು ಮಕ್ಕಳನ್ನು ಬಳಸುವುದಕ್ಕೆ ಚುನಾವಣಾ ಸಮಿತಿ ನಿಷೇಧ ಹೇರಿದೆ.

### ಪರೀಕ್ಷಾ ಪತ್ರಿಕೆಗಳ ಸೋರಿಕೆ ತಡೆಗಟ್ಟಲು ಮಸೂದೆ ಅಂಗೀಕರಿಸಿದ ಲೋಕಸಭೆ

ಸರ್ಕಾರಿ ನೇಮಕಾತಿ ಪರೀಕ್ಷೆಗಳಲ್ಲಿ ಪರೀಕ್ಷಾ ಪತ್ರಿಕೆಗಳ ಸೋರಿಕೆಯಂತಹ ಮೋಸದ ಅಭ್ಯಾಸಗಳನ್ನು ತಡೆಯಲು ಲೋಕಸಭೆ 'ವಂಚನೆ–ವಿರೋಧಿ' ಮಸೂದೆಯನ್ನು ಅಂಗೀಕರಿಸಿದೆ. ಸಾರ್ವಜನಿಕ ಪರೀಕ್ಷೆಗಳ (ಅನ್ಯಾಯ ವಿಧಾನಗಳ ತಡೆಗಟ್ಟುವಿಕೆ) ಮಸೂದೆಯನ್ನು ಲೋಕಸಭೆಯಲ್ಲಿ ಅಂಗೀಕರಿಸಲಾಗಿದ್ದು, ರಾಜ್ಯಸಭೆಯಲ್ಲಿ ಇನ್ನು ಮಂಡಿಸಬೇಕಾಗುತ್ತದೆ. ರಾಜ್ಯಸಭೆಯಲ್ಲಿ ಅನುಮೋದನೆ ಪಡೆದ ಬಳಿಕ ಅದನ್ನು ಒಪ್ಪಿಗೆಗಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಲಾಗುತ್ತದೆ. ಅಧಿಕಾರಿಗಳೊಂದಿಗೆ ಶಾಮೀಲಾಗಿ ಪರೀಕ್ಷೆಯ ಪತ್ರಿಕೆಗಳನ್ನು ಸೋರಿಕೆ ಮಾಡುವ ಅಥವಾ ಉತ್ತರ ಪತ್ರಿಕೆಗಳನ್ನು ತಿದ್ದುವವರಿಗೆ 10 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 1 ಕೋಟಿ ರೂಪಾಯಿ ದಂಡ ವಿಧಿಸಲಾಗುತ್ತದೆ.

### ಕಾರ್ಯಾಚರಿಸಲಿದೆ ಭಾರತದ ಮೊದಲ ಹೆಲಿಕಾಪ್ಟರ್ ತುರ್ತು ವೈದ್ಯಕೀಯ ಸೇವೆ



ರಿಷಿಕೇಶದಲ್ಲಿರುವ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಫಾರ್ ಮೆಡಿಕಲ್ ಸೈನ್ಸಸ್ (ಏಮ್ಸ್) ನಿಂದ ಭಾರತದ ಮೊದಲ ಹೆಲಿಕಾಪ್ಟರ್ ಎಮರ್ಜೆನ್ಸಿ ಮೆಡಿಕಲ್ ಸರ್ವೀಸ್ (HEMS) ಕಾರ್ಯಾಚರಿಸಲಿದೆ. ಊಇಒಖ ಮೂಲಕ, ಹೆಲಿಕಾಪ್ಟರ್‌ಗಳನ್ನು ಬಳಸಿಕೊಂಡು ದೇಶದಾದ್ಯಂತ ವೈದ್ಯಕೀಯ ಸೇವೆ ಮತ್ತು ಆಘಾತ ಆರೈಕೆ ಸೇವೆಗಳಿಗೆ ಪ್ರವೇಶವನ್ನು ವಿಸ್ತರಿಸಲು ಸರ್ಕಾರ ಉದ್ದೇಶಿಸಿದೆ. ಹೊಸ ಹೆಲಿಕಾಪ್ಟರ್ ತುರ್ತು ವೈದ್ಯಕೀಯ ಸೇವೆಗಳು (HEMS) 150 ಕಿಲೋಮೀಟರ್ ವ್ಯಾಪ್ತಿಯೊಳಗೆ 'ಸಂಜೀವನಿ' ಯೋಜನೆಯಡಿ ಕಾರ್ಯನಿರ್ವಹಿಸುತ್ತದೆ.

### ಜಲ ಜೀವನ್ ಮಿಷನ್ ಬಿಲ್ಲಿಂಗ್‌ಗಾಗಿ EMB ಸಾಫ್ಟ್‌ವೇರ್ ಅಳವಡಿಸಿದ ಯುಪಿ

ಜಲ ಜೀವನ್ ಮಿಷನ್‌ನಲ್ಲಿ ಬಿಲ್ಲಿಂಗ್‌ಗಾಗಿ ಎಲೆಕ್ಟ್ರಾನಿಕ್ ಮೆಝರ್‌ಮೆಂಟ್ ಬಿಲ್ (ಇಎಮ್‌ಬಿ) ಸಾಫ್ಟ್‌ವೇರ್ ಅನ್ನು ಸಂಪೂರ್ಣವಾಗಿ ಅಳವಡಿಸಿದ ಭಾರತದ ಮೊದಲ ರಾಜ್ಯ ಉತ್ತರ ಪ್ರದೇಶವಾಗಿದೆ. ಈ ಬಿಲ್ಲಿಂಗ್ ಸಾಫ್ಟ್‌ವೇರ್‌ನ ಪರಿಚಯದೊಂದಿಗೆ, ಜಲ ಜೀವನ್ ಮಿಷನ್‌ನಲ್ಲಿ ಕಾರ್ಯನಿರ್ವಹಿಸುವ ಕಂಪನಿಗಳು ಈಗ ಕೇವಲ 14 ದಿನಗಳಲ್ಲಿ ಪಾವತಿಯನ್ನು ಸ್ವೀಕರಿಸುತ್ತವೆ. ಆನ್‌ಲೈನ್‌ನಲ್ಲಿ ನಡೆಸಲಾಗುತ್ತಿರುವ ಸಂಪೂರ್ಣ ಪ್ರಕ್ರಿಯೆಯು ಭ್ರಷ್ಟಾಚಾರಕ್ಕೆ ಯಾವುದೇ ಅವಕಾಶವನ್ನು ನೀಡುವುದಿಲ್ಲ. ಇಎಂಬಿ ಸಾಫ್ಟ್‌ವೇರ್ ಮೂಲಕ ಇಷ್ಟು ದೊಡ್ಡ ಪ್ರಮಾಣದಲ್ಲಿ ಪಾವತಿಗಳನ್ನು ಕಾರ್ಯಗತಗೊಳಿಸಿದ ದೇಶದ ಅತಿದೊಡ್ಡ ರಾಜ್ಯವಾಗಿ ಉತ್ತರ ಪ್ರದೇಶವು ಹೊರಹೊಮ್ಮಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th FEBRUARY 2024
REGISTERED NEWS PAPER RNI 36528/79 LICENSE TO POST
WITHOUT PREPAYMENT LICENSE NO PMG/BG/WPP-46/2024-2026 AT BENGALURU PSO
BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 01-03-2024



## ಶಾಶ್ವತ ಸುಖವನ್ನು ನೀಡಬಲ್ಲ ಸತ್ಯ ಸರ್ವರಿಗೂ ಬೇಕು: ಡಾ. ಮೋಹನ್ ಭಾಗವತ್




**ದೆಹಲಿ:** ಜಗತ್ತಿನಲ್ಲಿ ಶಾಶ್ವತ ಸುಖವನ್ನು ನೀಡುವ ಸತ್ಯ ಸರ್ವರಿಗೂ ಬೇಕಿದೆ. ಆದರೆ ಜಗತ್ತು ಹಾಗೂ ಭಾರತದ ನಡುವೆ ಇರುವ ವ್ಯತ್ಯಾಸವೆಂದರೆ ಸತ್ಯಕ್ಕಾಗಿ ಬಾಹ್ಯ ಹುಡುಕಾಟದಲ್ಲಿ ಜಗತ್ತು ನಿಂತರೆ, ನಾವು ಬಾಹ್ಯದ ಹುಡುಕಾಟದ ನಂತರ ಅಂತರಂಗದ ಶೋಧದ ಮೂಲಕ ಶಾಶ್ವತ ಸತ್ಯದೆಡೆಗೆ ಸಂಚರಿಸಿದ್ದೇವೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಹೇಳಿದರು.

ಭಗವಾನ್ ಮಹಾವೀರ ಸ್ವಾಮಿ ಅವರ ನಿರ್ವಾಣದ 2550ನೇ ವರ್ಷದ ನಿಮಿತ್ತ ದೆಹಲಿಯ ವಿಜ್ಞಾನ ಭವನದಲ್ಲಿ ಆಯೋಜಿಸಲಾದ ಕಲ್ಯಾಣಕ ಮಹೋತ್ಸವದಲ್ಲಿ ಅವರು ಮಾತನಾಡಿದರು.

ವೇದ, ಪುರಾಣ, ಎಲ್ಲಾ ಉಪನಿಷತ್ತುಗಳು, ರಾಮಾಯಣ, ಮಹಾಭಾರತ, ಭಗವದ್ಗೀತೆ, ಜೈನಗ್ರಂಥ, ಬೌದ್ಧ ತ್ರಿಪೀಟಿಕಾ ಮತ್ತು ಗುರುಗ್ರಂಥ ಸಾಹಿಬ್‌ನಲ್ಲಿರುವ ಸಂತರ ವಾಣಿಗಳು ಭಾರತದ ಶ್ರೇಷ್ಠ ಜ್ಞಾನ ನಿಧಿ ಎಂದು ನಾವು ನಿತ್ಯ ಪಠಿಸುವ ಏಕಾತ್ಮತಾ ಸ್ತೋತ್ರ ತಿಳಿಸುತ್ತದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ರಾಷ್ಟ್ರಸಂತ ಪರಂಪರಾಚಾರ್ಯ ಶ್ರೀ ಪ್ರಜ್ಞಾಸಾಗರ ಮುನಿರಾಜರು, ಚತುರ್ಥ ಪಟ್ಟಾಚಾರ್ಯ ಶ್ರೀ ಸುನೀಲ್ ಸಾಗರ್ ಮುನಿರಾಜರು, ಪ್ರವರ್ತಕ ಡಾ. ರಾಜೇಂದ್ರ ಮುನಿ, ಆಚಾರ್ಯ ಮಹಾಶ್ರಮಣ ಅವರ ಶಿಷ್ಯೆ ಸಾಧ್ವಿ ಅಣಿಮಾ ಶ್ರೀ, ಮಹಾಸಾಧ್ವಿ ಪ್ರೀತಿರತ್ನ ಅವರೊಂದಿಗೆ ಸಕಲ ಜೈನ ಸಮಾಜದ ಪೂಜನೀಯ ಸಾಧು, ಸಂತರು ಮತ್ತು ಸಾಧ್ವಿ ಗಣ ಉಪಸ್ಥಿತರಿದ್ದರು

## ಹಿರಿಯ ಕರಸೇವಕರೊಂದಿಗೆ ಸಂವಾದ ಕಾರ್ಯಕ್ರಮ.



**ಬೆಂಗಳೂರು:** 1990ರ ಹಾಗೂ 1992ರಲ್ಲಿ ಅಯೋಧ್ಯೆ ಶ್ರೀರಾಮಜನ್ಮಭೂಮಿ ಹೋರಾಟದ ಆಂದೋಲನದಲ್ಲಿ ಭಾಗವಹಿಸಿದ್ದ ಬೆಂಗಳೂರಿನ ಹಿರಿಯ ಕರಸೇವಕರೊಂದಿಗೆ ಸಂವಾದ ಕಾರ್ಯಕ್ರಮವು ಚಾಮರಾಜಪೇಟೆಯ ಕೇಶವಶಿಲ್ಪದಲ್ಲಿ ನಡೆಯಿತು. ಕರಸೇವಕರಾಗಿ ಭಾಗವಹಿಸಿದ್ದ ಹಿರಿಯ ಕಾರ್ಯಕರ್ತರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರೀಯ ಪ್ರಚಾರಕ್ ಸುಧೀರ್ ಮಾತನಾಡಿದರು. ಹಿರಿಯ ಕಾರ್ಯಕರ್ತರು ತಮ್ಮ ಅನುಭವಗಳನ್ನು ಹಂಚಿಕೊಂಡರು. ಕ್ಷೇತ್ರೀಯ ಸಂಘಚಾಲಕ ವಿ. ನಾಗರಾಜ, ಬೆಂಗಳೂರು ಮಹಾನಗರ ಸಂಘಚಾಲಕ ಮಿಲಿಂದ್ ಗೋಖಲೆ ಉಪಸ್ಥಿತರಿದ್ದರು.



## ಅಬುಧಾಬಿಯ ಮೊದಲ ಹಿಂದೂ ದೇವಾಲಯ ಉದ್ಘಾಟನೆ



**ಅಬುಧಾಬಿ:** ಮಧ್ಯಪ್ರಾಚ್ಯದಲ್ಲಿರುವ ಭಾರತೀಯ ಸಮುದಾಯಕ್ಕೆ ಅತ್ಯಂತ ಮಹತ್ವಪೂರ್ಣವಾದ ಮೈಲಿಗಲ್ಲಾಗಿ ಅಬುಧಾಬಿಯಲ್ಲಿ ಭವ್ಯವಾಗಿ ನಿರ್ಮಾಣವಾಗಿರುವ ಹಿಂದೂ ದೇವಾಲಯವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. 27 ಎಕರೆಯಲ್ಲಿ ಹರಡಿರುವ ಮತ್ತು 700 ಕೋಟಿ ರೂಪಾಯಿಗೂ ಹೆಚ್ಚು ವೆಚ್ಚದಲ್ಲಿ ನಿರ್ಮಿಸಲಾದ BAPS ಹಿಂದೂ ದೇವಾಲಯವು ಭಾರತ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ನಡುವಿನ ಗಾಢವಾದ ಸಂಬಂಧದ ಸಂಕೇತವಾಗಿದೆ.

ಈ ಭವ್ಯ ಮಂದಿರದ ಸಂಕೀರ್ಣವು ಸಂದರ್ಶಕರ ಕೇಂದ್ರ, ಪ್ರದರ್ಶನಗಳು, ಪ್ರಾರ್ಥನೆಯನ್ನು ಒಳಗೊಂಡಿದೆ. ಸಭಾಂಗಣಗಳು, ಕಲಿಕೆಯ ಪ್ರದೇಶಗಳು, ಮಕ್ಕಳು ಮತ್ತು ಯುವಕರಿಗೆ ಕ್ರೀಡಾ ಸೌಲಭ್ಯಗಳು, ಆಹಾರ ನ್ಯಾಯಾಲಯ, ಸುಂದರ ಉದ್ಯಾನಗಳು, ಪುಸ್ತಕದ ಅಂಗಡಿ, ಜೊತೆಗೆ ಹಲವಾರು ಇತರ ಸೌಕರ್ಯಗಳನ್ನು ಒಳಗೊಂಡಿವೆ. ದೇವಾಲಯವು ಏಳು ಶಿಖರಗಳನ್ನು ಒಳಗೊಂಡಿದೆ. ಪ್ರತಿಯೊಂದೂ ಯುಎಇಯ ಎಮಿರೇಟ್ ಪ್ರತಿನಿಧಿಸುತ್ತದೆ ಮತ್ತು ಭಾರತದ ಗಂಗಾ ನದಿಯ ಘಾಟ್‌ಗಳನ್ನು ಹೋಲುವ ಆಂಫಿಥಿಯೇಟರ್, ಪುನರಾವರ್ತಿತ ಮರಳು ದಿಬ್ಬ ಮತ್ತು ಭಾರತದಲ್ಲಿ ಗಂಗಾ ಮತ್ತು ಯಮುನಾ ನದಿಗಳನ್ನು ಪ್ರತಿನಿಧಿಸುವ ಅಂಶಗಳನ್ನು ಒಳಗೊಂಡಿದೆ. 2015 ರಲ್ಲಿ ಯುಎಇ ಸರ್ಕಾರವು ಹಿಂದೂ ಮಂದಿರಕ್ಕಾಗಿ ಭೂಮಿಯನ್ನು ಮಂಜೂರು ಮಾಡಿತು.

## ಭಗವದ್ಗೀತೆಯ ಮೇಲೆ ಪ್ರಮಾಣ ವಚನ ಸ್ವೀಕರಿಸಿದ ಆಸ್ಟ್ರೇಲಿಯಾ ಸಂಸದ ವರುಣ್ ಘೋಷ್



**ನವದೆಹಲಿ:** ಬ್ಯಾರಿಸ್ಟರ್ ವರುಣ್ ಘೋಷ್ ಅವರು ಭಗವದ್ಗೀತೆಯ ಮೇಲೆ ಪ್ರಮಾಣ ವಚನ ಸ್ವೀಕರಿಸಿದ ಭಾರತ ಸಂಜಾತ ಆಸ್ಟ್ರೇಲಿಯಾದ ಸಂಸತ್ತಿನ ಮೊದಲ ಸದಸ್ಯ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಪಶ್ಚಿಮ ಆಸ್ಟ್ರೇಲಿಯಾದವರಾದವ ಘೋಷ್, ಫೆಡರಲ್ ಸಂಸತ್ತಿನ ಸೆನೆಟ್‌ನಲ್ಲಿ ಆಸ್ಟ್ರೇಲಿಯಾದ ರಾಜ್ಯವನ್ನು ಪ್ರತಿನಿಧಿಸಲು ಶಾಸಕಾಂಗ ಸಭೆ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ನಿಂದ ಆಯ್ಕೆಯಾದ ನಂತರ ಹೊಸ ಸೆನೆಟರ್ ಆಗಿ ನೇಮಕಗೊಂಡಿದ್ದಾರೆ.

## ಕನ್ನಡದಲ್ಲೇ ಸಿಎಪಿಎಫ್ ಪರೀಕ್ಷೆ

सत्यमेव जयते
CAPF

ಇದೇ ಮೊದಲ ಬಾರಿಗೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳಲ್ಲಿ (ಸಿಎಪಿಎಫ್) ಕಾನ್‌ಸ್ಟೇಬಲ್‌ಗಳ ನೇಮಕಾತಿಗಾಗಿ ಪರೀಕ್ಷೆಯನ್ನು ಹಿಂದಿ ಮತ್ತು ಇಂಗ್ಲಿಷ್ ಜತೆಗೆ ಕನ್ನಡವೂ ಸೇರಿ 13 ಪ್ರಾದೇಶಿಕ ಭಾಷೆಗಳಲ್ಲಿ ನಡೆಸುವುದಾಗಿ ಕೇಂದ್ರ ತಿಳಿಸಿದೆ. ದೇಶಾದ್ಯಂತ 128 ನಗರಗಳಲ್ಲಿ ಫೆಬ್ರವರಿ 20ರಿಂದ ಮಾರ್ಚ್ 7 ರವರೆಗೆ ನಡೆಯಲಿರುವ ಪರೀಕ್ಷೆಯಲ್ಲಿ ಸುಮಾರು 48 ಲಕ್ಷ ಅಭ್ಯರ್ಥಿಗಳು ಹಾಜರಾಗಲಿದ್ದಾರೆ. ಈ ನಿರ್ಧಾರ ಯುವಕರ ಆಯ್ಕೆಯ ಭವಿಷ್ಯ ಹೊಂದಲು ಸಹಕಾರಿಯಾಗಲಿದೆ.

**ಯಾವ್ಯಾವ ಭಾಷೆಗಳಲ್ಲಿ ಪರೀಕ್ಷೆ?**

ಇಂಗ್ಲಿಷ್ ಮತ್ತು ಹಿಂದಿ ಅಲ್ಲದೇ ಕನ್ನಡ, ಅಸ್ಸಾಮಿ, ಬೆಂಗಾಲಿ, ಗುಜರಾತಿ, ಮರಾಠಿ, ಮಲಯಾಳಂ, ತಮಿಳು, ತೆಲುಗು, ಒಡಿಯಾ, ಉರ್ದು, ಪಂಜಾಬಿ, ಮಣಿಪುರಿ, ಕೊಂಕಣಿ.

## ಅಯೋಧ್ಯೆಯ ಬಾಲರಾಮನ ಹೋಲುವ ವಿಷ್ಣು ವಿಗ್ರಹ ಮತ್ತು ಶಿವಲಿಂಗ ಪತ್ತೆ



ರಾಯಚೂರು ತಾಲೂಕಿನ ದೇವಸುಗೂರು ಹತ್ತಿರದ ಕೃಷ್ಣಾ ನದಿಯಲ್ಲಿ ಅಯೋಧ್ಯೆ ಬಾಲರಾಮನ ಮೂರ್ತಿ ಹೋಲುವ ಪುರಾತನ ವಿಷ್ಣುವಿನ ಎರಡು ವಿಗ್ರಹ ಮತ್ತು ಒಂದು ಶಿವಲಿಂಗ ಪತ್ತೆಯಾಗಿವೆ. ನದಿಯಲ್ಲಿ ಹೊಸ ಸೇತುವೆ ನಿರ್ಮಾಣ ನಡೆಯುತ್ತಿದ್ದು, ಜೆಸಿಬಿಯಿಂದ ಮಣ್ಣು ಅಗೆವಾಗ ಮೂರ್ತಿಗಳು ಪತ್ತೆಯಾಗಿವೆ. ಸ್ಥಳದಲ್ಲಿದ್ದ ಮೀನುಗಾರರು ಇವುಗಳನ್ನು ಸುರಕ್ಷಿತ ಸ್ಥಳದಲ್ಲಿಟ್ಟಿದ್ದಾರೆ. ಮೂರ್ತಿಗಳು ವಿಜಯನಗರ ಅರಸರ ಕಾಲಕ್ಕಿಂತ ಹಿಂದಿನದಿರಬೇಕು ಎಂದು ಅಂದಾಜಿಸಲಾಗುತ್ತಿದೆ. ಮೂರ್ತಿ ಸುತ್ತಲೂ ವಿಷ್ಣುವಿನ ಅವತಾರಗಳನ್ನು ಕೆತ್ತಲಾಗಿದೆ. ವರಾಹ, ವಾಮನ ಅವತಾರಗಳು ಸ್ಪಷ್ಟವಾಗಿ ಕಾಣುತ್ತಿವೆ. ಕೆಳಗಡೆ ಗರುಡ ವಾಹನ ಕೆತ್ತನೆ ಮಾಡಲಾಗಿದೆ. ಮೂರ್ತಿಗಳು ಅಯೋಧ್ಯೆ ಬಾಲರಾಮನ ಶಿಲೆಯಲ್ಲಿ ಮೂರ್ತಿಗಳನ್ನು ಕೆತ್ತನೆ ಹೋಲುವ ವಿಷ್ಣುವಿನ ಮೂರ್ತಿ. ಭಗ್ನಗೊಂಡ ನಂತರದಲ್ಲಿ ಅವುಗಳನ್ನು ನದಿಯಲ್ಲಿ ವಿಸರ್ಜನೆ ಮಾಡಿರಬಹುದು, ಇಲ್ಲವೇ ನದಿ ದಂಡೆಯಲ್ಲಿ ಈ ಹಿಂದೆ ದೇವಸ್ಥಾನ ಇರಬಹುದು ಎನ್ನುವ ಅಭಿಪ್ರಾಯ ಇತಿಹಾಸ ತಜ್ಞರಿಂದ ಕೇಳಿ ಬರುತ್ತಿದೆ.

## ಬಡತನ ಮತ್ತು ಹಸಿವು ನಿರ್ಮೂಲನಾ ನಿಧಿಗೆ $1 ಮಿಲಿಯನ್ ಯುಎಸ್ ಕೊಡುಗೆ ನೀಡಿದ ಭಾರತ



ಭಾರತ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾ (IBSA), ಸ್ಥಾಪಿಸಿದ ಬಡತನ ಮತ್ತು ಹಸಿವು ನಿವಾರಣೆ ನಿಧಿಗೆ ಭಾರತವು 1 ಮಿಲಿಯನ್ ಯುಎಸ್ ಡಾಲರ್‌ಗಳನ್ನು ಕೊಡುಗೆ ನೀಡಿದೆ. ಈ ನಿಧಿಯು ಬಡತನ ಮತ್ತು ಹಸಿವನ್ನು ನಿವಾರಿಸುವ ಗುರಿಯನ್ನು ಹೊಂದಿದೆ. ಯುಎನ್‌ಗೆ ಭಾರತದ ಖಾಯಂ ಪ್ರತಿನಿಧಿ, ರಾಯಭಾರಿ ರುಚಿರಾ ಕಾಂಬೋಜ್ ಅವರು ದಕ್ಷಿಣ–ದಕ್ಷಿಣ ಸಹಕಾರಕ್ಕಾಗಿ ಯುಎನ್ ಕಛೇರಿ (ಯುಎನ್‌ಒಎಸ್‌ಎಸ್‌ಸಿ) ದಿಮಾ ಅಲ್–ಖತೀಬ್‌ಗೆ ಚೆಕ್ ಅನ್ನು ಹಸ್ತಾಂತರಿಸಿದರು. •

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 8722552497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.